ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಗುರುವಾರ 23ನೇ ಮಾರ್ಚ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ಎಂ.ವಿ. ವೆಂಕಟಪ್ಪ)** ಅವರು ಪೀಠವನ್ನು ಅಲಂಕರಿಸಿದ್ದರು.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000

(ಸದನದ ಬಾವಿಗೆ ಬಿಜೆಪಿ ಹಾಗೂ ಜನತಾದಳ (ಎಸ್) ಮತ್ತು ಜನತಾದಳ (ಯು) ಸದಸ್ಯರುಗಳು ಧರಣಿಯಲ್ಲಿ ನಿರತರಾದರು)

ಅಧ್ಯಕ್ಷರು : ನೀವು ಯಾವ ವಿಷಯದ ಮೇಲೆ ಧರಣಿಯನ್ನು ಮಾಡುತ್ತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

(ಸರ್ಕಾರದ ವಿರುದ್ಧ ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಧಿಕ್ಕಾರದ ಘೋಷಣೆಗಳನ್ನು ಕೂಗಿದರು)

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿನ ಈ ಸದನದಲ್ಲಿ ಏನು ನಡೆಯಿತು, ಮೊನ್ನೆ ದಿನ ಏನು ನಡೆಯಿತು ಎನ್ನುವುದರ ಬಗ್ಗೆ ವಿವರಿಸುತ್ತೇನೆ. ಬಿಲ್ ಇಂಟ್ರಡ್ಯೂಸ್‌ಗೆ ಇವತ್ತಿನ ಆಡಳಿತಪಕ್ಷ ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗೋಸ್ಕರ ಸ್ಥಾನಗಳ ಮೀಸಲಾತಿಯ ನಿಗಧಿಯನ್ನು ಮಾಡುವ ಸಲುವಾಗಿ ಎಲೆಕ್ಷನ್ ಕಮೀಷನ್‌ಗೆ ಇದ್ದ ಅಧಿಕಾರವನ್ನು ವಾಪಸ್ಸು ತೆಗೆದುಕೊಂಡು ಸರ್ಕಾರಕ್ಕೆ ಅಧಿಕಾರ ಸಿಗಬೇಕೆನ್ನುವ ದೃಷ್ಟಿಯಿಂದ ಒಂದು ಅಮೆಂಡ್‌ಮೆಂಟನ್ನು ತರುತ್ತಿದ್ದಾರೆ, ಆ ಬಿಲ್ಲನ್ನು ಮೂವ್ ಮಾಡುವಂತಹ ಸಂದರ್ಭದಲ್ಲಿಯೇ ನಾವು ವಿರೋಧವನ್ನು ವ್ಯಕ್ತಪಡಿಸಿರುತ್ತೇವೆ. ಇದು ಒಂದು ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧವಾದಂತಾಗುತ್ತದೆ, ಪ್ರತಿಪಕ್ಷದ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡುವಂಥಾದ್ದು ಮತ್ತು ಪ್ರತಿಪಕ್ಷವನ್ನು ಹತ್ತಿಕ್ಕತಕ್ಕಂತಹ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಪ್ರತಿಪಕ್ಷದವರಿಗೂ ಒಂದು ಗೌರವವಿದೆ ಎನ್ನುವ ಆ ಒಂದು ವ್ಯವಸ್ಥೆಯನ್ನು ಇವತ್ತು ಹಾಳು ಮಾಡಲಿಕ್ಕೆ ಸರ್ಕಾರ ಹೊರಟಿದೆ. ಇವತ್ತು ಸರ್ಕಾರ ತ-ನ್ನದೇ ಆದಂತಹ ಶಾಸಕರ ಮತ್ತು ಕಾರ್ಯಕರ್ತರ, ತಮ್ಮ ಪಕ್ಷದ ಅಧ್ಯಕ್ಷರ ಮಾತಿಗೆ ಮಣಿಯನ್ನು ಹಾಕಿ ಅವರ ಒತ್ತಡಕ್ಕೆ ಒಳಗಾಗಿ ಈ ಅಮೆಂಡ್‌ಮೆಂಟ್‌ನ ಸಲುವಾಗಿ ಆ ಬಿಲ್ಲನ್ನು ಮೂವ್ ಮಾಡಿದೆ. ನಮ್ಮ ಪ್ರತಿಭಟನೆಯ ಮಧ್ಯದಲ್ಲಿ ಆ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ಅದು ಸರಿಯಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡದೆ ಅದನ್ನು

ಪಾಸು ಮಾಡಿಕೊಂಡದ್ದು ಇರುತ್ತದೆ. ಸರ್ಕಾರ ಇಂತಹ ಒಂದು ಪರಿಸ್ಥಿತಿಯಲ್ಲಿ ಪ್ರತಿಭಟನೆಯ ಮಧ್ಯೆದಲ್ಲಿ ಬಿಲ್ಲನ್ನು ಪಾಸು ಮಾಡಿಕೊಂಡಿರುತ್ತದೆ. ಅದಕ್ಕಾಗಿ ಇವತ್ತು ನಾವು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಪ್ರತಿಭಟನೆಯನ್ನು ಇಲ್ಲಿ ಅಸ್ತ್ರವಾಗಿ ಬಳಸಿದ್ದೇವೆ, ಇದರ ಬಗ್ಗೆ ನಾವು ಜನತೆಯ ಬಳಿಗೆ ಹೋಗುತ್ತಿದ್ದೇವೆ. ಇವತ್ತು ಪ್ರಜಾತಂತ್ರದ ಕೊಲೆಯಾಗಿದೆ, ನಮ್ಮ ಪ್ರಜಾತಂತ್ರದ ಇತಿಹಾಸದಲ್ಲಿ ಇಂತಹ ಕರಾಳ ಶಾಸನ ಇರಲಿಕ್ಕಿಲ್ಲ. ಇಂತಹ ಕರಾಳ ಶಾಸನ ತಂದಿರತಕ್ಕಂತಹ ಸರ್ಕಾರದ ವಿರುದ್ಧ ಜನಕಲ್ಯಾಣದ ವಿರುದ್ಧ ತಂದಿರುವ ಈ ಬಿಲ್ಲಿಗೆ ನಾವು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ಇವತ್ತು ನಾವು ಪ್ರತಿಭಟನೆಯನ್ನು ಮುಂದುವರಿಸುತ್ತಿದ್ದೇವೆ. ಇವತ್ತು ನಾವು ಸರ್ಕಾರಕ್ಕೆ ಬಹಳ ವಿನಂತಿಯನ್ನು ಮಾಡಿಕೊಂಡಿರುತ್ತೇವೆ. ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಎಂ.ವೈ. ಘೋರ್ಪಡೆಯವರು ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ಒಂದು ಬಿಲ್ಲನ್ನು ಮಂಡನೆ ಮಾಡಿ ಪಾಸು ಮಾಡಿಕೊಂಡರು. ಬೇಕಾದರೆ ಮಾನ್ಯ ಘೋರ್ಪಡೆಯವರು ತಮ್ಮ ಆತ್ಮಸಾಕ್ಷಿಗೆ ಇದು ವಿರುದ್ಧವಾಗಿದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ತಮ್ಮ ಆತ್ಮವನ್ನು ಮುಟ್ಟಿ ನೋಡಿಕೊಳ್ಳಲಿ, ಗ್ರಾಮಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಹಿಂದೆ ಏನು ಮೀಸಲಾತಿ ಮಾಡಿದ್ದರೋ ಆ ಒಂದು ವ್ಯವಸ್ಥೆ ಉತ್ತಮವಾಗಿತ್ತು ಎನ್ನುವುದನ್ನು ಅವರು ತಮ್ಮ ಆತ್ಮಕ್ಕೆ ತೆಗೆದುಕೊಳ್ಳಲಿ, ಜನರ ಒಂದು ಅಭಿಪ್ರಾಯವನ್ನು ತಿಳಿದುಕೊಳ್ಳಲಿ. ಇಷ್ಟೆಲ್ಲಾ ನಾವು ಕನ್‌ವಿನ್ಸ್ ಮಾಡಿದ್ದರೂ ಅದಕ್ಕೆ ಸರ್ಕಾರ ಸೊಪ್ಪು ಕೂಡ ಹಾಕಲಿಲ್ಲ, ಅದಕ್ಕಾಗಿ ನಾವು ಇವತ್ತು ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಒಂದು ಸದನಕ್ಕೆ ಅತ್ಯಂತ ಗೌರವವಿದೆ. ಇದಕ್ಕೆ ಒಂದು ಮಹತ್ವದ ಸ್ಥಾನವಿದೆ. ಈ ಒಂದು ಸದನದಲ್ಲಿ ನಮ್ಮ ಹಕ್ಕುಗಳನ್ನು ನಾವು ಪ್ರತಿಪಾದಿಸಲಿಕ್ಕೆ ಅವಕಾಶವಿದೆ. ಇವತ್ತು ರಾಜಕೀಯ ವಿರೋಧಿಗಳನ್ನು ದಮನಮಾಡಲಿಕ್ಕೆ ಏನು ಹೊರಟಿದ್ದಾರೆ ಅದನ್ನು ಹೇಳುವುದಕ್ಕೆ ಸಾಕಷ್ಟು ಪ್ರಯತ್ನ ಹಾಗೂ ವಿನಂತಿಯನ್ನು ಏನು ಮಾಡಿದೆವು. ಆದರೂ ಸರ್ಕಾರ ಇವತ್ತು ಮಣಿಯುತ್ತಿಲ್ಲ, ಇನ್ನು ನಮಗೆ ಕೊನೆಯ ಅಸ್ತ್ರವಿದೆ. ಅದೇನೆಂದರೆ, ಇವತ್ತು ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ನಾವು ಮನವಿಯನ್ನು ಕೊಡುವುದು. ಇವತ್ತು ಸರ್ಕಾರ ಏನು ತಪ್ಪು ಮಾಡುತ್ತಿದೆ, ಎಂತಹ ಬಿಲ್ಲುಗಳನ್ನು ಇವತ್ತು ಪಾಸು ಮಾಡುತ್ತಿದೆ, ಎಂತಹ ಕರಾಳ ಶಾಸನವನ್ನು ಮಾಡುತ್ತಿದೆ, ಇಂತಹದ್ದಕ್ಕೆ ತಾವು ಒಪ್ಪಿಗೆಯನ್ನು ಕೊಡಬಾರದೆಂದು ಹೇಳುವ ಮುಂದಿನ ಹಾದಿ ಇದೆ. ಅದನ್ನು ನಾವು ಇವತ್ತು ಮಾಡುತ್ತಿದ್ದೇವೆ, ಆದ್ದರಿಂದ ನಾವು ಸರ್ಕಾರಕ್ಕೆ ಕೊನೆಯದಾಗಿ ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಈ ಒಂದು ಹಂತದಲ್ಲಿ ಆದರೂ ಆ ಶಾಸನವನ್ನು ಹಿಂತೆಗೆದುಕೊಳ್ಳುವಂತಾದ್ದು ಆಗಲಿ, ಸರ್ಕಾರದಲ್ಲಿ ಯಾರೋ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರಬಹುದು, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರಕ್ಕೆ ಬರಬಹುದು. ಯಾರು ಮೆಜಾರಿಟಿ ಇರುತ್ತಾರೆ, ಅವರನ್ನು ಬಿಟ್ಟು ಇನ್‌ಫ್ಲೂಯೆನ್ಸ್ ಮಾಡುವಂಥಾದ್ದು ಈ ಬಿಲ್ಲಿನಿಂದ ಆಗುತ್ತದೆ. ಡಿಸಿಯವರಿಗೆ ಇನ್‌ಫ್ಲೂಯೆನ್ಸ್ ಮಾಡಿ ಪ್ರತಿಪಕ್ಷದವರು ನಾವು ಅಧಿಕಾರಕ್ಕೆ ಬರುತ್ತೇವೆ.

SRI R. ROSHAN BAIG : Sir, The house is not in order.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಹೇಳುವುದನ್ನು ಕೇಳುವುದಕ್ಕೆ ಇವರಿಗೆ ಟೈಮ್ ಇಲ್ಲ. ಇವರು ಅಷ್ಟೊಂದು ತರಾತುರಿಯಲ್ಲಿದ್ದಾರೆ. ನಾವು ಹೇಳುವುದನ್ನು ತಾವು ಸ್ವಲ್ಪ ಕೇಳಬೇಕು. ನೀವು ನಂತರ ಬೇಕಾದರೆ ಹೇಳಿ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆಯ ಬಿಲ್ಲ್‌ನ ಬಗ್ಗೆ ಏನೋ ಸಬ್‌ಮಿಷನ್ ಮಾಡುತ್ತಿದ್ದಾರೆ, ಅವರು ಎರಡು ನಿಮಿಷಗಳು ಮಾತನಾಡುತ್ತಾರೆ, ನಂತರ ಅವರು ಸುಮ್ಮನಾಗುತ್ತಾರೆ. ರೂಲಿಂಗ್ ಪಾರ್ಟಿಯ ಪರವಾಗಿ ಮಾನ್ಯ ಚಂದ್ರೇಗೌಡರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಆ ಮಸೂದೆ ಅಂಗೀಕಾರವಾಗಿದೆ, ಮತ್ತೆ ಅದೇ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶವಿದೆಯೇ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಸಬ್‌ಮಿಟ್ ಮಾಡುವಾಗ ನಾನು ಬೇಡವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಇವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ, ಬಹುಮತವಿರುವ ಈ ಸರ್ಕಾರದ ಹಕ್ಕನ್ನು ಇವರು ಕಸಿದುಕೊಳ್ಳುವುದಕ್ಕೆ ಆಗುತ್ತದೆಯೇ? ಮಸೂದೆಯನ್ನು ಮಂಡನೆ ಮಾಡುವ ಹಕ್ಕು ನಮ್ಮದು. ಮಸೂದೆ ಮಂಡನೆ ಮಾಡುವ ಹಕ್ಕನ್ನು ಅವರು ಎಳೆದು ತೆಗೆದುಕೊಳ್ಳುತ್ತಾರೆಂದು ಯಾವ ನಿಯಮದ ಪ್ರಕಾರ ಆದೇಶವಿದೆ. ಇಲ್ಲಿ ಅವರಿಗೆ ಮಾತನಾಡಲು ಅವಕಾಶ ಕೊಡುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಅಧ್ಯಕ್ಷರು : 'ಕೌಲ್ ಅಂಡ್ ಶಕ್ದರ್'ನ್ನು ತಾವು ಓದಿರಬಹುದು, ಅದನ್ನು ಓದದಿದ್ದರೆ ಓದಿ. ಮಾನ್ಯ ಸಭಾನಾಯಕರಿಗೆ ಎಷ್ಟು ಗೌರವವಿರುತ್ತದೆಯೋ ಅಷ್ಟೇ ಗೌರವವನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೊಡಬೇಕಾಗುತ್ತದೆ. ದಯವಿಟ್ಟು ಮಾತನಾಡದೆ ಎಲ್ಲರೂ ಕುಳಿತುಕೊಳ್ಳಿ. ಅವರು ಎರಡು ನಿಮಿಷ ಸಬ್‌ಮಿಷನ್ ಮಾಡುತ್ತಿದ್ದಾರೆ, ಅಷ್ಟಕ್ಕೆ ತಾವು ಏಕೆ ಗಲಾಟೆ ಮಾಡುತ್ತೀರಿ? ನಂತರ ಮಾನ್ಯ ಚಂದ್ರೇಗೌಡರು ಮಾತನಾಡುತ್ತಾರೆ. ನಂತರ ನಮ್ಮ ಕಾರ್ಯಕ್ರಮವನ್ನು ಮುಂದುವರಿಸೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು ಈ ಒಂದು ಶಾಸನದ ಮುಖಾಂತರ ಕಾಂಗ್ರೆಸ್ ಸರ್ಕಾರ ಹಿಂದಿನ ಬಾಗಿಲಿನಿಂದ ಅಧಿಕಾರವನ್ನು ಹಿಡಿಯುವುದಕ್ಕೆ ಹೋಗುತ್ತಿದೆ.

ಅಧ್ಯಕ್ಷರು : ಅವರು ಇಲ್ಲಿ ಎರಡು ನಿಮಿಷ ಸಬ್‌ಮಿಷನ್ ಮಾಡಿ ಮಾನ್ಯ ರಾಜ್ಯಪಾಲರ ಮನೆಗೆ ಹೋಗುತ್ತಾರೆ. ನೀವು ಏಕೆ ಅಷ್ಟರಲ್ಲಿ ಗಲಾಟೆಯನ್ನು ಮಾಡುತ್ತೀರಿ? I can't understand.

(ಗೊಂದಲ)

MR. SPEAKER : You must have some patience. ಅವರು ರಾಜ್ಯಪಾಲರ ಮನೆಗೆ ಹೋಗುತ್ತೇನೆಂದು ಹೇಳಿದರಲ್ಲಾ? ನೀವು ರಾಜ್ಯಪಾಲರ ಹತ್ತಿರ ಹೋಗುತ್ತೇನೆಂದು ಹೇಳಿದ್ದನ್ನೆ ನಾನು ಹೇಳಿದೆ. Sarcastic ಆಗಿ ಹೇಳಲಿಲ್ಲ. only for information ಗಾಗಿ ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಅದಕ್ಕಾಗಿ ನಾನು ಇವತ್ತು ಹೇಳುವುದೇನೆಂದರೆ, ಈ ಒಂದು ಕರಾಳ ಶಾಸನ ಅಷ್ಟೇ ಅಲ್ಲ, ಈ ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ ಮಾಡುವಂತದಷ್ಟೇ ಅಲ್ಲ, ಇವತ್ತು ಹಿಂಬಾಗಿಲಿನಿಂದ ಅಧಿಕಾರವನ್ನು ಹಿಡಿಯುವಂತಹ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಇದು ಸಂವಿಧಾನಬಾಹಿರ ಎಂದು ನಾನು ಹೇಳುತ್ತಿದ್ದೇನೆ, ಇವತ್ತು ನಮ್ಮ ಸಂವಿಧಾನದ ಆರ್ಟಿಕಲ್ 243(ಕೆ) ಅದರ ಬಗ್ಗೆ ಹೇಳುವಂಥಾದ್ದು. It reads thus: ``Elections to the Panchayats:

"The Superintendence, direction and control of the preparation of electoral rolls for the conduct of elections to the panchayats shall be vested in the State Election Commission consisting of a State Election Commissioner to be appointed by the Governor".

ಅಂದರೆ ಇವತ್ತು ಸಂವಿಧಾನ ಭದ್ರವಾಗಿ ಸದ್ಯಕ್ಕೆ ಎಲೆಕ್ಷನ್ ಪ್ರೋಸೆಸ್ ನಡೆಯುತ್ತಿದೆ, ಅಲ್ಲಿ ಯಾರು ಇರಬೇಕು, ಆ ಚುನಾವಣೆಯಲ್ಲಿ ರಿಸರ್ವೇಶನ್, ನಾವು ರಿಸರ್ವೇಶನನ್ನು ಮಾಡಿದಂತಹ ಸಂದರ್ಭದಲ್ಲಿ ಅದಕ್ಕೆ ಅಧ್ಯಕರು ಮತ್ತು ಉಪಾಧ್ಯಕ್ಷರು ಯಾವಯಾವ ಸೀಟುಗಳನ್ನು ಯಾರಿಗೆ ಅಲಾಟ್ ಮಾಡಬೇಕು, ಎಲೆಕ್ಷನ್ ಪ್ರೋಸೆಸ್ ಇವುಗಳನ್ನೆಲ್ಲಾ ಮಾಡುವಂತದ್ದು ಸಂವಿಧಾನಬದ್ಧವಾಗಿ ಇವತ್ತು ಎಲೆಕ್ಷನ್ ಕಮಿಷನರ್‌ಗೆ ಅಧಿಕಾರವನ್ನು ಕೊಟ್ಟಂಥಾದ್ದನ್ನು ಕಸಿದುಕೊಳ್ಳುತ್ತಿದ್ದಾರೆ. ಇವತ್ತು ಕರಾಳ ಈ ಒಂದು ಶಾಸನದ ಮುಖಾಂತರ ಅದನ್ನು ಕಸಿದುಕೊಳ್ಳುತ್ತಿದ್ದಾರೆ. ಅದಕ್ಕೆ ಪ್ರಜಾತಂತ್ರದ ವ್ಯವಸ್ಥೆಯನ್ನು ಇವರು ಕೊಲೆ ಮಾಡುತ್ತಿದ್ದಾರೆ. ಅದಕ್ಕಾಗಿ ಈ ಒಂದು ಸದನದಲ್ಲಿ ನಮ್ಮ ಹೋರಾಟವನ್ನು ಮಾಡಿದ್ದೇವೆ, ಪ್ರತಿಭಟನೆಯನ್ನು ಮಾಡಿದ್ದೇವೆ, ಅಷ್ಟಕ್ಕೂ ಸರ್ಕಾರ ಇವತ್ತು ಮಣಿದಿಲ್ಲ. ಅದಕ್ಕಾಗಿ ಇವತ್ತು ಪ್ರಜಾತಂತ್ರದ ಕೊಲೆಯನ್ನು ನಿಲ್ಲಿಸಲಿಕ್ಕೆ ಈ ಕರಾಳ ಶಾಸನವನ್ನು ತಡೆಯುವ ಸಲುವಾಗಿ ಇವತ್ತು ನಾವು ಮಾನ್ಯ ರಾಜ್ಯಪಾಲರನ್ನು ಭೇಟಿಯಾಗಿ ಅವರಲ್ಲಿ ಮನವಿಯನ್ನು ಸಲ್ಲಿಸಲಿದ್ದೇವೆ, ಅದಕ್ಕಾಗಿ ನಾವು ಮುಂದಿನ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ.

+ ಶ್ರೀ ಸಿ. ಭೈರೇಗೌಡ (ವೇಮ್‌ಗಲ್) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ನಡೆದಂತಹ ಘಟನೆ ಈ ಸದನದ ಚರಿತ್ರೆಯಲ್ಲಿ ಎಂದೂ ನಡೆದಿಲ್ಲ. ಹಿಂದೆ ಅನೇಕ ಸಂದರ್ಭಗಳಲ್ಲಿ ಸರ್ಕಾರ ಶರಣಾಗಿದೆ. ಹಿಂದೆ ಈ ರೀತಿಯಾದ ಘಟನೆಗಳು ನಡೆದಿರಲಿಲ್ಲ, ಅಂದಾಕ್ಷಣ ಧರಣಿಗೂ ಮುಂತಾದವು ನಡೆದಿಲ್ಲವೆಂದು ನಾನು ಹೇಳುತ್ತಿಲ್ಲ. ಕೆಲವು ಸಾಮಾನ್ಯವಾದಂತಹ ವಿಚಾರಗಳ ಬಗ್ಗೆ ಇಲ್ಲಿ ಧರಣಿ ನಡೆದಿರುವುದು ಉಂಟು; ಧರಣಿ ನಡೆದಿರತಕ್ಕಂತಹ ಸಂದರ್ಭದಲ್ಲಿ ಕೆಲವು ಮೋಷನ್ಸ್‌ಗಳು

ಪಾಸಾಗಿರುವುದು ಕೂಡ ಉಂಟು. ಆದರೆ ಒಂದು ಪ್ರಮುಖವಾದಂತಹ ಕಾನೂನು, ರಾಜ್ಯದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸತಕ್ಕಂಥಾದ್ದು ಗ್ರಾಮೀಣ ಜನತೆಗೆ ಅವರ ಅಧಿಕಾರವನ್ನು ಅವರ ಕೈಗೆ ಕೊಡುವಂತಹ ಒಂದು ಮಹತ್ತರವಾದಂತಹ ಈ ಮಸೂದೆಯ ಬಗ್ಗೆ ವಿಕಪಕ್ಷೀಯವಾಗಿ ಈ ರೀತಿಯಾದಂತಹ ತೀರ್ಮಾನ ಈ ಸದನದಲ್ಲಂತೂ ಆಗಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಕೊಠಡಿಗೆ ನಮ್ಮನ್ನೆಲ್ಲಾ ಕರೆದಿದ್ದೀರಿ, ಇದರ ಬಗ್ಗೆ ನಾವು ಕೆಲವು ಸೂಚನೆಗಳನ್ನು ಕೊಟ್ಟೆವು, ಸರ್ಕಾರಕ್ಕೆ ಕಾನೂನನ್ನು ತಿದ್ದುಪಡಿ ಮಾಡುವಂತಹ ಅಧಿಕಾರ ಇಲ್ಲವೆಂದು ನಾನು ಹೇಳಲಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತ ಇರತಕ್ಕಂಥವರು, ಇಂತಹ ಕಾನೂನುಗಳ ಬಗ್ಗೆ ಒಪ್ಪಿಗೆಯನ್ನು ತೆಗೆದುಕೊಳ್ಳುವುದಕ್ಕೆ ಇಲ್ಲಿ ಸಾಧ್ಯತೆ ಇದೆ. ಅದನ್ನು ನಾವು ಇವತ್ತು ಪ್ರಶ್ನೆಯನ್ನು ಮಾಡುತ್ತಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಆಡಳಿತಪಕ್ಷ ಎಷ್ಟು ಮುಖ್ಯವೋ ವಿರೋಧ ಪಕ್ಷವೂ ಅಷ್ಟೇ ಮುಖ್ಯವಾಗಿದೆ. ನಾವು ಹೇಳಬೇಕಾಗಿರುವುದನ್ನು ಹೇಳಿದರೆ ಅದನ್ನು ಅವರು ಕೇಳಬೇಕಾಗಿರುವುದು ಅವರ ಕರ್ತವ್ಯವು ಹೌದು. ಅದು ಪ್ರಜಾಪ್ರಭುತ್ವದ essence. ಅದರ ಆಧಾರದ ಮೇಲೆ ತಾವು ತಮ್ಮ ಕೊಠಡಿಯಲ್ಲಿ ನಿನ್ನೆ ನಮಗೆ ವಿವರಣೆಯನ್ನು ಕೊಡಲಿಕ್ಕೆ ಕರೆದಿದ್ದಿರಿ. ನಾವು ಕೆಲವು ಸೂಚನೆಗಳನ್ನು ಕೊಟ್ಟಿರುತ್ತೇವೆ, ಕೆಲವು ಸೂಚನೆಗಳನ್ನು ಒಪ್ಪಿಕೊಳ್ಳತಕ್ಕಂಥಾದಕ್ಕೆ ಸರ್ಕಾರ ಮುಂದಾಗಿದ್ದಂತಹ ಸನ್ನಿವೇಶ ಕೂಡ ತಮ್ಮ ಗಮನಕ್ಕೆ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಇದ್ದಾಗ ಇನ್ನು ಸಹ ಮಾತುಕತೆಯನ್ನು ಮುಂದುವರಿಸೋಣ ಎನ್ನತಕ್ಕಂತಹ ಸಂದರ್ಭದಲ್ಲಿ ತಾವು ಈ ಸದನಕ್ಕೆ ಬಂದಿರುತ್ತೀರಿ. ಈ ಸದನಕ್ಕೆ ಬಂದ ನಂತರ ಸರ್ಕಾರ ಇಲ್ಲಿ ನಡೆದುಕೊಂಡಿರತಕ್ಕಂತಹ ವಿಧಾನ ನೋಡಿದರೆ ಬಹಳ ನಾಚಿಕೆಗೇಡಿತನದಿಂದ ನಡೆದುಕೊಂಡಿದೆ. ತರಾತುರಿಯಲ್ಲಿ ಇವತ್ತು ಮಾಡಬೇಕಾಗಿರುವುದನ್ನು ಮಾಡದೆ, ಪುನಃ ನಮ್ಮನ್ನು ಮಾತುಕತೆಗೆ ಕರೆದು ನಮ್ಮ ಅಭಿಪ್ರಾಯ ಈ ರೀತಿಯಾಗಿದೆ, ಈ ಕಾನೂನುನಿಂದ ಈ ರೀತಿಯಾದಂತಹ ಪರಿಣಾಮವಾಗುತ್ತದೆ, ಸದನದಲ್ಲಿ ನಮ್ಮ ಮನಸ್ಸನ್ನು ಒಲಿಸತಕ್ಕಂತಹದ್ದರ ಜೊತೆಗೆ ಸದನದ ಹೊರಗಡೆಯೂ ಕೂಡ ತಮ್ಮ ಕೊಠಡಿಯಲ್ಲಿ ಮನಸ್ಸನ್ನು ಒಲಿಸತಕ್ಕಂತಹ ಅವಕಾಶ ಕೂಡ ಇತ್ತು. ಆ ಅವಕಾಶವನ್ನು ಕೂಡ ಅವರು ಬಳಸಿಕೊಳ್ಳದೆ ಇವರಿಗೆ ಬಹುಮತ ಇದೆ brute majority ಇದೆ, ಎನ್ನತಕ್ಕಂಥಾದ್ದನ್ನು ತೋರಿಸಿ ಇವತ್ತು ನಮ್ಮ ಮೇಲೆ ಹೇರಿ ನಮ್ಮ ಬಾಯಿಯನ್ನು ಮುಚ್ಚಿ, ನಮ್ಮ ಬಾಯಿಯನ್ನು ಕಟ್ಟಿಹಾಕಿ, ನಮ್ಮ ಬಾಯಿಗೆ ಬಟ್ಟೆಯನ್ನು ತುರುಕಿ ಇವತ್ತು ಬಿಲ್ಲನ್ನು ಪಾಸು ಮಾಡಿಕೊಂಡಿರತಕ್ಕಂಥಾದ್ದು ಇದು ಎಷ್ಟರಮಟ್ಟಿಗೆ ಈ ಸರ್ಕಾರಕ್ಕೆ ಶೋಭಾಯಮಾನವನ್ನು ತರುತ್ತದೆ? ನಮ್ಮ ರಾಜ್ಯದಲ್ಲಿರತಕ್ಕಂತಹ ವಿಧಾನಸಭೆಯು ತನ್ನದೇ ಆದಂತಹ ಪರಂಪರೆಯನ್ನು, ತನ್ನದೇ ಆದಂತಹ ರೀತಿ ನೀತಿ ವಿಧಾನಗಳನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿರತಕ್ಕಂಥಾದ್ದು ಇದೆ. ಅದಕ್ಕೆ ಇವತ್ತಿನ ದಿವಸ ಮಸಿ ಬಳಿಯುವಂತಹ ಕೆಲಸ ಆಡಳಿತ ಪಕ್ಷದಿಂದ ಆಗಿದೆ. ಇವತ್ತು ಆಡಳಿತಪಕ್ಷದಲ್ಲಿ ಇರುವಂತಹವರು ಯಾರು ಯಾರು? ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆಯಲ್ಲಿದ್ದವರು, ರಾಜ್ಯ ಸಭೆಯಲ್ಲಿದ್ದವರು, ಜೊತೆಗೆ ಅವರು ಅಪಾರವಾದಂತಹ ಅನುಭವವನ್ನು ಹೊಂದಿದವರಾಗಿದ್ದಾರೆ. ಇಂತಹವರು ಇವತ್ತು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಶ್ರೀಮಾನ್ ಫೋರ್ಪಡೆಯವರು ಕೂಡ ಈ ಸದನದಲ್ಲಿ ಹಿರಿಯ

ಸದಸ್ಯರಾಗಿದ್ದಾರೆ, ಅಪಾರವಾದ ಅನುಭವವನ್ನು ಹೊಂದಿರತಕ್ಕಂಥವರು ಮತ್ತು ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಬಗ್ಗೆ ಕಾಳಜಿ ಇರತಕ್ಕವರು. ಅಂತಹವರು ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾರೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದಂತಹ ಮಾನ್ಯ ಡಿ.ಟಿ. ಚಂದ್ರೇಗೌಡರು ಈ ಸದನದಲ್ಲಿ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದಂತಹವರು. ಹಿಂದೆ ಮಂತ್ರಿಯಾಗಿದ್ದವರು, ರಾಜ್ಯಸಭಾ, ಲೋಕಸಭಾ ಸದಸ್ಯರಾಗಿ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಾಗಿ ಎಲ್ಲಾ ಸಂಸದೀಯ ವ್ಯವಸ್ಥೆಗಳು ಏನಿವೆ ಅವೆಲ್ಲವುಗಳಲ್ಲಿ ಭಾಗವಹಿಸಿರತಕ್ಕವರು, ಅವರಿಗೆ ಅಪಾರವಾದ ಅನುಭವವಿದೆ. ಈ ಸದನದಲ್ಲಿ ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿರತಕ್ಕವರು; ಯಾವತ್ತೂ ಕೂಡ ಸಂಸದೀಯ ನಡವಳಿಕೆಗಳನ್ನು ಬಹಳ ಮೇಲಕ್ಕೆ ಎತ್ತಿ ಹಿಡಿದಿರತಕ್ಕ ಅನುಭವವಿರತಕ್ಕವರು ಮಾನ್ಯ ಚಂದ್ರೇಗೌಡರು ಇರತಕ್ಕ ಸಂದರ್ಭದಲ್ಲಿ ಈ ರೀತಿಯಾದ ಕಾನೂನುಗಳನ್ನು ಮಾಡುವುದಕ್ಕೆ ಅವರೇ ಮುಂದಾಗಿ 'ನೀವು ಮೂವ್ ಮಾಡಿ, ನೀವು ಮೂವ್ ಮಾಡಿ'ಯೆಂದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಅವರೇ ಪ್ರೇರೇಪಣೆಯನ್ನು ಕೊಟ್ಟು ಅವರಿಗೆ ಬಹುಮತವಿದೆ ಎನ್ನತಕ್ಕದ್ದನ್ನು ದುರುಪಯೋಗಪಡಿಸಿಕೊಳ್ಳತಕ್ಕ ಕೆಲಸವನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾಡಿದ್ದಾರೆ. ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿದ್ದಂತಹ ಸಂದರ್ಭದಲ್ಲಿ ಅವರ ನಡವಳಿಕೆ ಯಾವರೀತಿ ಇತ್ತು ಎಂಬುದನ್ನು, ಅವೊತ್ತಿನ ದಿವಸ ತಾವು ಕೂಡ ಆಡಳಿತ ಪಕ್ಷದಲ್ಲಿ ಇದ್ದಿರಿ. ಅವೊತ್ತು ಅವರು ಬಳಸಿರತಕ್ಕ ಕೆಲವು ಪದಗಳನ್ನು ನಾನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆಡಳಿತ ಪಕ್ಷವನ್ನು ಕುರಿತು ಹೇಳಿರತಕ್ಕ ಮಾತುಗಳು. ಅವರು ಹೇಳಿರತಕ್ಕದ್ದು ಕಡತದಲ್ಲಿದೆ. ಅವರು ಏನು ಹೇಳಿದ್ದಾರೆ? ಆಡಳಿತ ಪಕ್ಷವನ್ನು ಕುರಿತು ಅವರು ಹೇಳಿರತಕ್ಕದ್ದು, 'ನಿಮ್ಮದು xx 'ನಿಮ್ಮದು xx' ಎನ್ನತಕ್ಕ ಪದವನ್ನು ಅವರು ಬಳಸಿದ್ದಾರೆ. ಅವೊತ್ತು ಇದ್ದಂತಹ ಕಾಂಗ್ರೆಸ್ ಪಕ್ಷಕ್ಕೆ ನಿಮ್ಮದು xx' ಎನ್ನತಕ್ಕ ಆ ಪದವನ್ನು ಮಾನ್ಯ ಚಂದ್ರೇಗೌಡರು ಬಳಸಿದ್ದಾರೆ. ಇವತ್ತು ಅದು ಕಡತದಲ್ಲಿದೆ. ಇವತ್ತು ನಾನು ಮಾನ್ಯ ಚಂದ್ರೇಗೌಡರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಅವೊತ್ತಿನ ದಿವಸ xx ಎನ್ನತಕ್ಕದ್ದು ಇವತ್ತು ನೀವು xx ಕೂಡ ನಾಚಿಸತಕ್ಕ ನಿಷ್ಠೆಯನ್ನು ಕಾಂಗ್ರೆಸ್ ಪಕ್ಷದಲ್ಲಿ ತೋರಿಸುತ್ತಾ ಇದ್ದೀರಿ. ಇದು ನಿಮ್ಮ ವ್ಯಕ್ತಿತ್ವಕ್ಕೆ ಶೋಭಾಯಮಾನ ತರತಕ್ಕದ್ದಾ? ಇವತ್ತು ನಿಮ್ಮದು ಯಾವ ನಿಷ್ಠೆ? xx ಕೂಡ ನಾಚಿಸತಕ್ಕ, ಅದನ್ನು ಕೂಡ ಮೀರತಕ್ಕ ನಿಷ್ಠೆಯನ್ನು ಇವತ್ತಿನ ದಿವಸ ನೀವು ಅಧಿಕಾರಕ್ಕೋಸ್ಕರ, ನೀವು ಆ ಸ್ಥಾನಕ್ಕೋಸ್ಕರ ನಿಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಯತಕ್ಕ ಕೆಲಸವನ್ನು ಮಾನ್ಯ ಚಂದ್ರೇಗೌಡರು ಮಾಡಿರತಕ್ಕದ್ದನ್ನು

(ಗೊಂದಲ)

xx ನಿಷ್ಠೆಯನ್ನು ತೋರಿಸಿ ಈ ಸದನಕ್ಕೆ ಅವಮಾನವಾಗುವಂತಹ ಕೆಲಸವನ್ನು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡತಕ್ಕ ಕೆಲಸವನ್ನು ಏನು ಮಾಡಿದ್ದಾರೆ ಇದು ಮಾನ್ಯ ಚಂದ್ರೇಗೌಡರಿಗೆ ಶೋಭಾಯಮಾನವೇ ಎನ್ನತಕ್ಕ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಇದು

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇವರಿಗೆ ಶೋಭಾಯಮಾನ ತರತಕ್ಕದ್ದಲ್ಲ. ಗ್ರಾಮೀಣ ಜನತೆಯ ಮುಖಕ್ಕೆ ಮಸಿ ಬಳಿಯತಕ್ಕದ್ದು, ಚುನಾಯಿತ ಪ್ರತಿನಿಧಿಗಳಿಗೆ ಮಸಿ ಬೆಳಿಯತಕ್ಕದ್ದು ಸರ್ವಾಧಿಕಾರಯುತ ಸರ್ಕಾರದ ವ್ಯವಸ್ಥೆಯನ್ನು ಇವತ್ತು ಮಾಡಿರುವುದಕ್ಕೆ ಇವರ ಅಧಿಕಾರಕ್ಕೆ ಧಿಕ್ಕಾರವನ್ನು ಹಾಕಿ ನಾವೆಲ್ಲ ಮಾನ್ಯ ರಾಜ್ಯಪಾಲರ ಮುಂದೆ ಹೋಗುವವರು ಇದ್ದೇವೆ. ನಮ್ಮ ಹಳ್ಳಿಯ ಕಡೆ 'ನದಿಯ ತನಕ ಓಟ' ಎನ್ನತಕ್ಕ ಒಂದು ಮಾತಿದೆ. ನಾವು ನದಿಯವರೆಗೂ ಹೋಗುವವರಿದ್ದೇವೆ, ಮಾನ್ಯ ರಾಜ್ಯಪಾಲರನ್ನು ಭೇಟಿಯಾಗುವವರಿದ್ದೇವೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತಂದು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಮಾನ್ಯ ಮಾನ್ಯ ಚಂದ್ರೇಗೌಡರೇ ನಿಮ್ಮ xx ಈ xx ಸಾಕು ಮಾಡಿ ಅನ್ನತಕ್ಕಂತಹ ಮನವಿಯನ್ನು ನಾನು ಮಾನ್ಯ ಚಂದ್ರೇಗೌಡರಲ್ಲಿ ಮಾಡಲು ಇಷ್ಟಪಡುತ್ತೇನೆ, ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು : "ನಾಯಿ ನಿಷ್ಟೆ ಎಂಬ ಪದವನ್ನು" ರೆಕಾರ್ಡ್ ಮಾಡುವುದು ಬೇಡ.

+ ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ನಾವು ಎಲ್ಲರೂ ಬಂದು ತಮ್ಮನ್ನು ಕೇಳಿಕೊಂಡಾಗ ನಮಗೆ ಅವಕಾಶ ಮಾಡಿಕೊಡಿ. ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ನಮಗೆ ಅವಕಾಶ ಸಿಗಲಿಲ್ಲ. ವಿರೋಧಪಕ್ಷದ ನಾಯಕರು ಮತ್ತು ಎಲ್ಲರೂ ಒಟ್ಟಿಗೆ ಹೋಗಿ ಅಲ್ಲಿ ಕುಳಿತುಕೊಂಡಾಗ ಮೂರು ದಿನಗಳಾದರೂ ಏನೂ ಪ್ರಯೋಜನವಾಗಲಿಲ್ಲ. ಸಮಯದ ಒಂದು ಚಿಂತನೆಯನ್ನು ಇಟ್ಟುಕೊಂಡು, ಈ ರೀತಿ ಸದನವನ್ನು ಕಂಟಿನ್ಯೂ ಮಾಡಿಕೊಂಡು ಹೋಗುವುದು ಇದು ಪ್ರಜಾತಂತ್ರದ ಕೊನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ದಯಮಾಡಿ ಆಡಳಿತ ಪಕ್ಷದವರು ಮಾಡಿರುವಂತಹ ವಿಚಾರದಲ್ಲಿ ಪ್ರತಿಯೊಬ್ಬರೂ ನಾವು ಇದನ್ನು ವಿರೋಧ ಮಾಡುತ್ತೇವೆ. ನಾವೇನು ವಿರೋಧ ಮಾಡುತ್ತಿದ್ದೇವೆ ಅದನ್ನು ನೀವು ಒಪ್ಪಿಕೊಂಡಿಲ್ಲ. ಕೊನೆಯ ವರೆಗೂ ಯಾವತ್ತೂ ಸಂಬಂಧವಿಲ್ಲವೆನ್ನುವ ಮಾತನ್ನು ತಿಳಿಸುತ್ತಾ, ಈ ಸಭೆಯ ಗಂಭೀರವನ್ನು ದಯಮಾಡಿ ಕಾಪಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಸದಸ್ಯರು ಮಾತನಾಡಿದಹಾಗೆ ಇದೆ. ಮಾನ್ಯ ವೆಂಕಟರಮಪ್ಪನವರೆ, ಮಾನ್ಯ ಪುಟ್ಟಸ್ವಾಮಿಯವರೆ, ನಿಮಗೂ ಬೇಕಾದರೆ ಸಮಯ ಕೊಡುತ್ತೇನೆ. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಿಂಧ್ಯಾರವರು ಮಾತನಾಡಿ. ಮಾನ್ಯಮಂತ್ರಿಗಳು ಉತ್ತರ ಕೊಡಬೇಕು. ಚೀಫ್‌ವಿಪ್ ಎಲ್ಲಿ ಹೋದರು? ಸ್ವಲ್ಪ ನಿಮ್ಮ ಸದಸ್ಯರುಗಳಿಗೆ ಹೇಳಿ. ಮಾನ್ಯ ಕರಿಯಣ್ಣನವರೇ ಕುಳಿತುಕೊಳ್ಳಿ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ಮಾನ್ಯ ಭೈರೇಗೌಡರು ತಮ್ಮ ತೀವ್ರ ಪ್ರತಿಭಟನೆ ಮತ್ತು ನಿನ್ನೆ ದಿನ ಈ ಸದನದಲ್ಲಿ ಮಂಡಿಸಿ ಅಂಗೀಕರಿಸಿರುವ ಪಂಚಾಯತ್ ರಾಜ್ ಮಸೂದೆಯ ಬಗ್ಗೆ ನಮ್ಮೆಲ್ಲರ ತೀವ್ರವಾದ ವಿರೋಧವನ್ನು ತಾವು ಅರ್ಥಮಾಡಿಕೊಂಡಿದ್ದೀರಿ ಎಂದು ನಾನು ಭಾವಿಸಿದ್ದೇನೆ.

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ತಾವು ಮನಸ್ಸಿನಿಂದ ಇದೆಲ್ಲ ಸರಿಯೆಂದು ಒಪ್ಪುವುದಿಲ್ಲ, ಸಂಸದೀಯ ವ್ಯವಹಾರಗಳು ಸರಿಯಾಗಿ ನಡೆಯಬೇಕು, ಈ ಸದನದ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕು ಎನ್ನತಕ್ಕ ಸದಿಚ್ಛೆ ತಮಗೆ ಇದೆಯೆನ್ನತಕ್ಕ ಅರಿವು ನಮಗೆ ಇದೆ. ಅದರ ಜೊತೆಗೆ ನಮಗೂ ಸಹಿತ ಈ ಸದನದಲ್ಲಿ ಪ್ರಚಾರಕ್ಕೋಸ್ಕರವಾಗಿ ಅಥವಾ ಯಾವುದೋ ದುರುದ್ದೇಶಗಳನ್ನು ಇಟ್ಟುಕೊಂಡು ನಾವು ವಿರೋಧ ಮಾಡುತ್ತಿಲ್ಲ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಈ ಮಸೂದೆಯಲ್ಲಿ ಎರಡು ವಿಚಾರಗಳು ಅಡಕವಾಗಿವೆ. ಒಂದು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳನ್ನು ಡೀಲಿಮಿಟೇಶನ್ ಮಾಡತಕ್ಕದ್ದು, ರಿಸರ್ವೇಶನ್ ಮಾಡತಕ್ಕದ್ದು ಮತ್ತು ಈಗಾಗಲೇ ಗ್ರಾಮಪಂಚಾಯತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಚುನಾವಣೆ ಏನು ನಡೆದಿದೆ, ಇದನ್ನು ಐದು ವರ್ಷಗಳಿಗೋಸ್ಕರ ನೀವು ಮಾಡಿರತಕ್ಕದ್ದು. ಇದನ್ನು ಎರಡೂವರೆ ವರ್ಷಕ್ಕೆ ಮೊಟಕು ಮಾಡತಕ್ಕ ಎರಡು ಅಂಶಗಳು ಈ ಮಸೂದೆಯಲ್ಲಿ ಅಡಕವಾಗಿದೆ. ನಾವಾದರೂ ಹೇಳತಕ್ಕದ್ದು ಏನು? ನೀವು ರಾಜಕೀಯ ದುರುದ್ದೇಶವನ್ನು ಇಟ್ಟುಕೊಂಡು ಮಾಡುತ್ತಿದ್ದೀರಿ ಎನ್ನುವ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಈಗ ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಆಳುವ ಪಕ್ಷದ ಜನಗಳ ಕಿವಿಗೆ ಅಂದರೆ ಮಂತ್ರಿಗಳ ಕಿವಿಗೆ ಇಂಪಾಗಿರತಕ್ಕ ಸಂಗೀತವನ್ನು ನುಡಿಸಲಿಕ್ಕೆ ಅವರ ತಾಳಕ್ಕೆ ತಕ್ಕಂತೆ ಕುಣಿಯಲಿಕ್ಕೆ ಜನ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿಲ್ಲ. ಆಳುವ ಪಕ್ಷದ ಮುಖಂಡರ ಕಿವಿಗೆ ಇಂಪಾಗಿರತಕ್ಕ ಸಂಗೀತವನ್ನು ನಾವು ನುಡಿಸಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನನಗೆ ಒಂದು ಸಂತೋಷ, ಅವರದು ಏನೇ ಇರಲಿ, ಮಾನ್ಯ ಫೋರ್ಪಡೆಯವರು 1997ನೇ ಇಸವಿ ಸೆಪ್ಟೆಂಬರ್ 11ನೇ ತಾರೀಖು ಮಾಡಿರತಕ್ಕ ಭಾಷಣ ಈ ರೀತಿ ಇದೆ. ಆ ಕಾರಣದಿಂದ ಎಲೆಕ್ಷನ್ ಕಮೀಷನ್ ವ್ಯಾಪ್ತಿಯನ್ನು ಜಾಸ್ತಿ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಪವರ್ಸ್ ಅಂಡ್ ಡ್ಯೂಟಿ ಕೂಡ ಇದು ಒಂದು ಮೂಲಭೂತವಾದ ಬದಲಾವಣೆ. ನಮ್ಮ ಪಂಚಾಯಿತಿ ರಾಜ್ಯದಲ್ಲಿ ಕರ್ನಾಟಕದ 1996ರ ಆಕ್ಟ್‌ನಲ್ಲಿ ಸೆಕ್ಷನ್ 93(ಸಿ) ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಹಾಗೆ ಸೆಕ್ಷನ್ 152 (ಸಿ) ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟಹಾಗೆ ನಾವು ಚುನಾವಣಾ ಆಯೋಗಕ್ಕೆ ಕೊಟ್ಟಿರತಕ್ಕ ಅಧಿಕಾರವನ್ನು ಸ್ವಾಗತ ಮಾಡುತ್ತೇನೆ ಎನ್ನತಕ್ಕ ಮಾತನ್ನು ಮಾನ್ಯ ಫೋರ್ಪಡೆಯವರು ಹೇಳಿದ್ದಾರೆ. ಇದನ್ನು ಅವರಿಗೆ ಕಳುಹಿಸಿ ಕೊಡುತ್ತಿದ್ದೇನೆ. ಅದರ ಜೊತೆಗೆ ವಿರೋಧಪಕ್ಷದ ನಾಯಕರು ನಮ್ಮ ಸಂವಿಧಾನದಲ್ಲಿರತಕ್ಕ 243(ಕೆ)ನೇ ಆರ್ಟಿಕಲ್ ಇದನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಇಷ್ಟೆಲ್ಲ ಇದ್ದರೂ ಸಹಿತ, ಮಾನ್ಯ ಅಧ್ಯಕ್ಷರೆ ತಾವು ಉದಾರಿಗಳು. ನಮ್ಮನ್ನು ಕರೆಸಿ ಮಾತನಾಡಿದ್ದೀರಿ. ಆದರೆ ಸಭಾನಾಯಕರು ಆ ಸಭೆಗೆ ಬಂದಿರಲಿಲ್ಲವೆನ್ನುವುದನ್ನು ನಾನು ನೆನಪು ಮಾಡಲಿಕ್ಕೆ ಬಯಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳೂ ಸಹ ಬಂದಿದ್ದರು. ಯಾವ ಕಾರಣಕ್ಕೋಸ್ಕರ ಇದನ್ನು ಹೇಳುತ್ತಿದ್ದಾರೆ, ಇದನ್ನೆಲ್ಲ ಏಕೆ ಪ್ರಸ್ತಾಪ ಮಾಡುತ್ತಿದ್ದಾರೆಂದು ನಿಮಗೆ ಅನಿಸಬಹುದು. ಏಕೆ ಇದೆಲ್ಲ ಮಾಡುತ್ತೀರಿ, ರಾಜ್ಯಪಾಲರ ಹತ್ತಿರ ಹೋಗಿ ನೇರವಾಗಿ ಮೆಮೋರಾಂಡಮ್ ಕೊಟ್ಟುಬಿಟ್ಟು ಪ್ರಚಾರ ತೆಗೆದುಕೊಂಡು ಹೋಗಿಯೆಂದು ನೀವು ಹೇಳಬಹುದು. ಆದರೆ ಈ ಸದನದಲ್ಲಿ ಆ ಮಸೂದೆ ಮಂಡನೆ ಆಗಿ ಅಂಗೀಕಾರವಾಗಿದೆ, ಅದು ವಿಧಾನ ಪರಿಷತ್ತಿಗೆ ಹೋಗಬೇಕು. ವಿಧಾನಪರಿಷತ್‌ನಲ್ಲಿ ಇದಕ್ಕೆ

ಮಂಜೂರಾತಿ ಸಿಗುವುದಿಲ್ಲ. ಮತ್ತೆ ಅದು ಇಲ್ಲಿಗೆ ವಾಪಸ್ಸು ಬರುತ್ತದೆ. ವಾಪಸ್ಸು ಬಂದಂತಹ ಸಂದರ್ಭದಲ್ಲಿ ಇದನ್ನು ನಾವು ಎಲ್ಲರೂ ಅರ್ಥಮಾಡಿಕೊಳ್ಳಬೇಕು, ಇದನ್ನು ತಾವು ಮತ್ತೆ ಮಂಡನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ಅದು ತಮ್ಮ ಕೈಯಲ್ಲಿದೆ. ಅದಕ್ಕೋಸ್ಕರವಾಗಿ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಮಾನ್ಯ ಘೋರ್ಪಡೆಯವರು ಹೇಳಿರತಕ್ಕದ್ದು ನೂರಕ್ಕೆ ನೂರರಷ್ಟು ಸತ್ಯವಾಗಿರತಕ್ಕ ವಿಚಾರ. ಮಾನ್ಯ ಖರ್ಗೆಯವರು ಹೇಳಿರತಕ್ಕದ್ದು ನೂರಕ್ಕೆ ನೂರರಷ್ಟು ಸತ್ಯ. ಮಾನ್ಯ ಹೆಚ್.ಕೆ. ಪಾಟೀಲರು ಹೇಳಿರತಕ್ಕದ್ದು ನೂರಕ್ಕೆ ನೂರರಷ್ಟು ಸತ್ಯವಾದ ವಿಚಾರ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

ಅಧ್ಯಕ್ಷರು : ಅದೇನು ಹೇಳಿ.

11.40 ಎ.ಎಂ

ಶ್ರೀ ಡಿ.ಬಿ. ಚಂದ್ರೇಗೌಡ : ವಿಧಾನ ಪರಿಷತ್ತಿನಲ್ಲಿ ನಡೆದಂಥ ಮಸೂದೆ ಬಗ್ಗೆ ಇಲ್ಲಿ ಹೇಳತಕ್ಕಂಥ ಅಧಿಕಾರ ಈ ಮನೆಯ ಶಾಸಕರಿಗೆ ಇಲ್ಲ. ದಯಮಾಡಿ ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು. ಸ್ವಾಮಿ. ಅವರ ಪಾಯಿಂಟ್ ಆಫ್ ಆರ್ಡರನ್ನು ನಾನೇ ಎತ್ತಿ ಹಿಡಿದು ಬಿಡುತ್ತೇನೆ. ಅದನ್ನು ನಾನು ವಾಪಸ್ಸು ತೆಗೆದುಕೊಂಡು ಬಿಡುತ್ತೇನೆ. ಇನ್ನು ಎರಡು ದಿವಸಗಳ ಒಳಗಡೆ ವಿಧಾನ ಪರಿಷತ್ತಿನಲ್ಲಿ ಈ ಮಸೂದೆಯ ಮುಖಕ್ಕೆ ಆಗತಕ್ಕಂಥ ಮಂಗಳಾರತಿ ಸರ್ಕಾರಕ್ಕೋ, ಈ ಮಸೂದೆಗೋ ಎನ್ನುವುದರ ಬಗ್ಗೆ ತೀರ್ಮಾನವಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೇ, ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಂಗೀತವನ್ನು ನುಡಿಸುತ್ತ, ಪಿಟೀಲು ಹಿಡಿದುಕೊಂಡು ನಾವು ಇಲ್ಲಿ ಕುಳಿತುಕೊಳ್ಳಬೇಕು. ಆಗ ಅವರಿಗೆ ಬಹಳ ರುಚಿಯಾಗಿರುತ್ತದೆ. ಮಾನ್ಯ ಅಧ್ಯಕ್ಷರೇ, ಇದು ತಮ್ಮ ಕೈಯ್ಯಲ್ಲಿದೆ. ನಾನು ನಿನ್ನೆ ಹೇಳಿದಹಾಗೆ ಆಡಳಿತ ಪಕ್ಷದ ಶಾಸಕರಿಗೆ ಅದು ಭಸ್ಮಾಸುರ ಆಗುತ್ತದೆ, ಈ ಸರ್ಕಾರಕ್ಕೆ ಭಸ್ಮಾಸುರ ಆಗುತ್ತದೆ. ಇವತ್ತು ಮಾನ್ಯ ಅಧ್ಯಕ್ಷರೇ....

ಶ್ರೀ ಸಿ.ಆರ್. ಸಗೀರ್ ಅಹಮದ್ : ಗ್ರಾಮಪಂಚಾಯಿತಿ ಚುನಾವಣೆಯನ್ನು ಮಾನ್ಯ ಸಿಂಧ್ಯಾರವರು ನಡೆಸಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರ ಸ್ಥಾನಗಳಿಗೆ ಎಷ್ಟೊಂದು ಪೈಪೋಟಿ, ಎಷ್ಟೊಂದು ಗಲಾಟೆಗಳು ಆಗುತ್ತಾ ಇರತಕ್ಕಂಥಾದ್ದನ್ನು ಸಹಿತ ನಾವು ನೋಡುತ್ತಿದ್ದೇವೆ. ಅದರಿಂದಾಗಿ ಜನ ಬೀದಿಯಲ್ಲಿ ನಮ್ಮನ್ನು ಹಿಡಿದುಕೊಂಡು ಹೊಡೆಯತಕ್ಕಂಥ ಕಾಲ ಬರುತ್ತದೆಯೆನ್ನುವುದನ್ನು ಅವರು

ನೆನಪಲ್ಲಿಟ್ಟುಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ತಮ್ಮ ಮನಸ್ಸಿನಲ್ಲಿ, ತಮ್ಮ ಆತ್ಮಸಾಕ್ಷಿ ಏನಿದೆ ಎನ್ನತಕ್ಕದ್ದು ನನಗೆ ಗೊತ್ತಿದೆ. ಮಾನ್ಯ ಫೋರ್ಪಡೆಯವರು ಏನು ಭಾಷಣ ಮಾಡಿದ್ದಾರೆ ಎನ್ನುವುದನ್ನು ಎತ್ತಿ ತೋರಿಸಿದ್ದೇವೆ. ಮಾನ್ಯ ಹೆಚ್.ಕೆ. ಪಾಟೀಲರು, ಮಾನ್ಯ ಖರ್ಗೆಯವರು ಮಾಡಿರತಕ್ಕಂಥ ಭಾಷಣ ಜಗಜ್ಜಾಹೀರಾಗಿರತಕ್ಕಂಥಾದ್ದು ತಮಗೆ ಗೊತ್ತಿದೆ. ಆದರೂ ಸಹಿತ ತಾವು ಏಕೆ ಇದಕ್ಕೆ ಅವಕಾಶ ಕೊಟ್ಟಿದ್ದೀರಿ? ತಾವು ಅವಕಾಶ ಕೊಟ್ಟಿದ್ದು, ಪಾಪ, ತಮಗೆ ಮನಸ್ಸಿಲ್ಲ ಎಂದು ತಮಗೆ ಗೊತ್ತಿದೆ. ತಾವು ಸರ್ಕಾರದ ಮೊಂಡುತನ, ನಿರ್ಲಜ್ಜತನದ ವರ್ತನೆ, ಪ್ರಜಾಪ್ರಭುತ್ವವನ್ನು ತಿರುಚಿ ಹಾಕತಕ್ಕಂಥ ಕ್ರಮ, ಉದ್ಧಟತನ, ಹಠಮಾರಿತನಕ್ಕೆ ಅವರ ಒತ್ತಡಕ್ಕೆ ತಾವು ಒಳಗಾಗಿ ತೀವ್ರವಾದ ವಿರೋಧ ಉಂಟಾದರೂ ಸಹಿತ ಈ ಮಸೂದೆಯನ್ನು ಅಂಗೀಕರಿಸುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ನಮ್ಮ ಸಂಸದೀಯ ಕಾರ್ಯಕಲಾಪಗಳಿಗೆ ಇದ ಒಂದು ಕಪ್ಪು ಚುಕ್ಕೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತಾ, ಈಗಲೂ ಸಹಿತ ತಾವು ಮನಸ್ಸನ್ನು ಬದಲಾಯಿಸಿ ಸರ್ಕಾರಕ್ಕೆ ಹೇಳುವುದಕ್ಕೆ ಅವಕಾಶ ಇದೆ. ಈ ಸರ್ಕಾರಕ್ಕೆ ಆನೆಗಾತ್ರದ ಬಲ ಬಂದುಬಿಟ್ಟಿದೆ, ಈ ಆನೆಗಾತ್ರದ ಬಲ ಬರುತ್ತಿರುವಾಗ ಆನೆಗೆ ಬೇಕಾದ ಕಬ್ಬನ್ನು ಕೆಲವರು ಕೊಡುತ್ತಿದ್ದಾರೆ. ಹಾಗೆಯೇ ಆನೆಯ ಮದ ಈ ಸರ್ಕಾರಕ್ಕೆ ಬಂದಿದೆ. ಆದ್ದರಿಂದ ರಾಜ್ಯದಾದ್ಯಂತ ಈಗಾಗಲೇ ಸರ್ಕಾರದ ವಿರುದ್ಧ ಮಾತುಗಳು ಕೇಳಿ ಬರುತ್ತಿವೆ, ಪ್ರಮುಖ ಪತ್ರಿಕೆಗಳಲ್ಲಿ ಲೇಖನಗಳು ಕೂಡ ಬರುತ್ತಿವೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ನಡೆಯತಕ್ಕಂಥ ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ನೋಡುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕೆ ಇಲ್ಲಿ ಧರಣಿ ಮಾಡಿದರೂ ಸಹ ಸರ್ಕಾರ ಈ ಮಸೂದೆ ಬಗ್ಗೆ ನಮ್ಮ ಮಾತನ್ನು ಕಡೆಗಣಿಸಿದೆ. ತಮಗೆ ಗೊತ್ತಿರುವ ಹಾಗೆ ರಾಜ್ಯಾಂಗವನ್ನು ರಾಜ್ಯದಲ್ಲಿ ಎತ್ತಿ ಹಿಡಿಯತಕ್ಕಂಥವರು ಮಾನ್ಯ ರಾಜ್ಯಪಾಲರು. ಆದುದರಿಂದ ನಾವು ರಾಜ್ಯಪಾಲರ ಹತ್ತಿರ ನಮ್ಮ ತೀವ್ರವಾದ ಪ್ರತಿಭಟನೆಯನ್ನು ಸಲ್ಲಿಸುತ್ತೇವೆ. ಈಗಲೂ ಸಹಿತ ಅದಕ್ಕೆ ಅವಕಾಶ ಇದೆ. ಧರಣಿ ನಿಲ್ಲಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಸನ್ಮಾನ್ಯ ಸಚಿವರು ಈಗ ತಾವು ಏನು ಮಸೂದೆಯನ್ನು ಅಂಗೀಕಾರ ಮಾಡಿ ಕೊಂಡಿದ್ದೀರಿ, ಅದಕ್ಕೆ ದಯಮಾಡಿ ಒಂದು ತಿದ್ದುಪಡಿಯನ್ನು ತನ್ನಿ. ಚುನಾವಣಾ ಆಯೋಗಕ್ಕೆ ಕೊಟ್ಟಿರತಕ್ಕಂಥ ಅಧಿಕಾರವನ್ನು ಮತ್ತೆ ವಾಪಸ್ಸು ಕೊಡುತ್ತೇವೆ ಎಂಬ ಮಾತನ್ನು ಹೇಳಿ. ನಿನ್ನೆ ದಿವಸ ನಾನು ಮಾತನಾಡುವಾಗ ಹೇಳಿದ್ದೇನೆ. ನಮ್ಮ ಸರ್ಕಾರ ಇದ್ದಾಗ ಎಲೆಕ್ಷನ್ ಕಮೀಷನ್‌ಗೆ ಗೈಡ್‌ಲೈನ್ಸನ್ನು ನಾವು ಕಳಿಸಿದ್ದೇವೆ. I am repeating it again. I am prepared to confirm this. You can move a privilege motion if it is not true. ಆದ್ದರಿಂದ ತಾವು ಸಹಿತ ಗೈಡ್‌ಲೈನ್ಸ್‌ನ್ನು ಕಳಿಸುವುದಕ್ಕೆ ಅಧಿಕಾರ ಇದೆ. ಹಾಗೆ ಮಾಡುವುದಾಗಿ ಈಗಲೂ ಸರ್ಕಾರ ಹೇಳಲಿ. ನಾವು ಧರಣಿ ನಿಲ್ಲಿಸುತ್ತೇವೆ. ಆ ಮಸೂದೆಯನ್ನು ಮತ್ತೆ ಮಂಡನೆ ಮಾಡುವುದಿಲ್ಲ ಎಂದು ಹೇಳಿದರೆ ನಾವು ವಾಪಸ್ಸು ಬರುತ್ತೇವೆ. ಮಾನ್ಯ ರಾಜ್ಯಪಾಲರ ಹತ್ತಿರ ನಾವು ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲವನ್ನು ನಾವು ಹೇಳತಕ್ಕದ್ದು ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕಾಗಿಯೇ ಹೊರತು ಕಣ್ಣು, ಕಿವಿ, ಸ್ಪರ್ಶಜ್ಞಾನ ಇಲ್ಲದ, ಪಂಚೇಂದ್ರಿಯಗಳನ್ನು ಕಳೆದುಕೊಂಡ ಈ ಸರ್ಕಾರಕ್ಕೆ ಏನು ಹೇಳುವುದಕ್ಕೆ ಆಗುತ್ತದೆ?

ಅಧ್ಯಕ್ಷರು : ನನ್ನ ಅಭಿಪ್ರಾಯವನ್ನು ನಾನು ಹೇಳಬೇಕಲ್ಲ. ನೀವು ಹೇಳಬೇಕಾದುದನ್ನು ಹೇಳಿದ್ದೀರಿ. ಸ್ಪೀಕರ್ ಆಗಿ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ.

+ ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ನಾವು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ಬಹಳ ಗಂಭೀರವಾಗಿ ಕುಳಿತು ಕೇಳಿದ್ದೇವೆ, ಆಲಿಸಿದ್ದೇವೆ. ಅದರಲ್ಲಿ ಅನೇಕ ಕಟುಶಬ್ದಗಳು ಇದ್ದರೂ, ಒಳಗಿನ ಭಾವನೆಗಳು ನಮಗೆ ಅರ್ಥವಾಗಿದೆ. ಆದರೆ ನನಗೆ ಅನಿಸಿದ್ದು ಏನೆಂದರೆ ಈ ಮಸೂದೆ ವಿಚಾರ ಮುಗಿದ ಅಧ್ಯಾಯ. ನಾವು ಯಾವುದನ್ನು ಇಲ್ಲಿ ಚರ್ಚೆ ಮಾಡಬಹುದು ಎಂದು ನಿಯಮ 35ರಲ್ಲಿ ಹೇಳಿದ್ದಾರೆ.

'... ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು ಆ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿರದ ಯಾವ ಕಾರ್ಯಕಲಾಪಗಳನ್ನೂ ಮಾನ್ಯ ಅಧ್ಯಕ್ಷರ ಅನುಮತಿಯಿಲ್ಲದೆ ಯಾವ ಉಪವೇಶನದಲ್ಲಿಯೂ ನಡೆಸತಕ್ಕುದಲ್ಲ' ಎಂದು ಇದೆ. ಇನ್ನೊಂದು, ನಾನು ಇದರಲ್ಲಿ ನೋಡಿದೆ. ಮುಖಂಡರುಗಳು ಮಾಡಿದ ಭಾಷಣಗಳಲ್ಲಿ ಎಲ್ಲೂ ಈ ಸದನದಲ್ಲಿ without the permission of the Hon'ble speaker ವಿಷಯಗಳ ಬಗ್ಗೆ ಚರ್ಚೆ ಮಾಡಿಲ್ಲ. ಅದು ಇಲ್ಲವೆಂದು ಯಾರೂ ಹೇಳಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಬೈರೇಗೌಡರು ನಮಗೆ ಅವಕಾಶ ಇದೆಯೆಂಬ ಮಾತನ್ನು ಹೇಳಿದ್ದಾರೆ. ಇದು ಒಂದು. ಎರಡನೆಯದು ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯಾಂಗದ 243(ಕೆ) ವಿಧಿಯನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಗಮನಕ್ಕೆ ತರುವುದಕ್ಕಾಗಿ ನಾನು ಮತ್ತೊಂದು ಸಲ ಅದನ್ನು ಓದುತ್ತೇನೆ. ಅದರ ಬಗ್ಗೆ ಹೆಚ್ಚು ವಿಚಾರ ನಾನು ಹೇಳುವುದಕ್ಕೆ ಹೋಗುವುದಿಲ್ಲ. Elections to the Panchayats - Superintendence, direction and control of the preparation of electoral rolls ಅದು ಚುನಾವಣಾ ಆಯೋಗಕ್ಕೆ ಇದೆ. ಅದರ ಬಗ್ಗೆ ನಾವು ಕೈಹಾಕಿಲ್ಲ ಹಾಗೂ ಪ್ರಸ್ತಾಪ ಮಾಡಿಲ್ಲ. ಈ ಮಸೂದೆಯಲ್ಲಿ ಆ ವಿಚಾರ ಚಕಾರ ಶಬ್ದ ಕೂಡ ಹೇಳಿಲ್ಲ. "Conduct of elections" ಅದನ್ನು ಅವರು ಮಾಡುತ್ತಾರೆ. ಸರ್ಕಾರ ಚುನಾವಣೆ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಯಾವ ಶಂಕೆಯೂ ಬೇಡ...."shall be vested in the State Election Commission consisting of Election Commissioner appointed by the Government". 243(ಕೆ)ಯಲ್ಲಿ ಚುನಾವಣಾ ಆಯೋಗದ ಬಗ್ಗೆ ಯಾವ್ಯಾವ ಶಬ್ದಗಳ ಬಳಕೆಯಾಗಿದೆಯೋ ಯಾವ ಕಾರಣಕ್ಕೂ ಆ ಆರ್ಟಿಕಲ್‌ನ ಯಾವುದೇ ಕೂದಲೂ ಕೊಂಕು ಸೋಕದ ಹಾಗೆ ನಾವು ಮಾಡಿದ್ದೇವೆ. Conduct of elections will be done exclusively by the Election Commission. Government will not conduct the elections. Let me make the position clear. Election Commission will alone conduct the elections. ಇಲ್ಲಿ ಪ್ರಶ್ನೆ ಏನಿದೆ ಎಂದರೆ ಎಷ್ಟರಮಟ್ಟಿಗೆ ಅದು ಅವರಿಗೆ ಅರ್ಥ ಆಗಿದೆಯೋ ನನಗೆ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡುವಾಗ ಅವರು ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುವಾಗ ನೀವು ಏಕೆ ಕೇಳುವುದಿಲ್ಲ? ನಿಮಗೆ ಸಾಕಷ್ಟು ಅವಕಾಶವನ್ನು ನಾನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೂ ಉತ್ತರ ಹೇಳುವುದಕ್ಕೆ ಅವಕಾಶ ಇರಬೇಕು.

ಅಧ್ಯಕ್ಷರು : ದಯವಿಟ್ಟು ಹೇಳಿ. ತಾವೆಲ್ಲರೂ ಈಗಾಗಲೇ ಮಾತನಾಡಿದ್ದೀರಿ.

(ಗೊಂದಲ)

(ಮಾನ್ಯ ಬಿ ಜೆ ಪಿ ಮತ್ತು ಜನತಾದಳ (ಸಂಯುಕ್ತ) ಶಾಸಕರು ದಿಕ್ಕಾರವನ್ನು ಕೂಗುತ್ತಾ, ಸಭಾತ್ಯಾಗ ಮಾಡಿದರು).

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಈ x ಶಾಸನವನ್ನು ವಿರೋಧಿಸಿ ನಾವು ಮಾನ್ಯ ರಾಜ್ಯಪಾಲರ ಬಳಿ ಹೋಗುತ್ತೇವೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಬಳಸಿದ ಅನೇಕ ಅನ್-ಪಾರ್ಲಿಮೆಂಟರಿ ಪದಗಳು ಕಡತಕ್ಕೆ ಹೋಗಿವೆ. ಅವರು ಮಾತನಾಡುವಾಗ ಕರಾಳ ಶಾಸನ ಎಂದು ಕರೆದಿದ್ದಾರೆ. ಅದಕ್ಕೆ ನಾನು ಎನು ಉತ್ತರ ಕೊಡುತ್ತೇನೋ ಅದು ಸಹ ಕಡತಕ್ಕೆ ಹೋಗಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಏನಾದರೂ ಅನ್-ಪಾರ್ಲಿಮೆಂಟರಿ ಪದಗಳನ್ನು ಬಳಸಿದ್ದರೆ ಆ ಪದಗಳನ್ನು ನಾನು ಕಡತದಿಂದ ತೆಗೆದು ಹಾಕುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಜನರಲ್ಲಿ ಕೆಲವು ತಪ್ಪು ಅಭಿಪ್ರಾಯ ಬಂದಿದೆ. ಅವರು ಮಾತನಾಡುವಾಗ ಹಿಂಬಾಗಿಲಿನಿಂದ ಅಧಿಕಾರ ಹಿಡಿಯುವುದಕ್ಕೆ ಈ ಶಾಸನವನ್ನು ತಂದಿದ್ದಾರೆಂದು ಅವರು ಹೇಳಿದರು. ನಮಗೆ ಮತ ಕೊಡುವವರು ಮತದಾರರು. ಚುನಾವಣಾ ಆಯೋಗ ನಮಗೆ ಮತದಾನ ಕೊಡುವುದಿಲ್ಲ. ನಾವು ಚುನಾವಣಾ ಆಯೋಗದ ಅಧಿಕಾರವನ್ನು ಮೊಟಕು ಮಾಡಿಲ್ಲ. ಚುನಾವಣೆಯನ್ನು ನಡೆಸುವವರು ಚುನಾವಣಾ ಆಯೋಗದವರು. ಚುನಾವಣಾ ಆಯೋಗದ ಎಲ್ಲಾ ಅಂಶಗಳನ್ನು ನಾವು ರಕ್ಷಣೆ ಮಾಡಿದ್ದೇವೆ. ವಿರೋಧಪಕ್ಷದ ಸದಸ್ಯರು ನಾವೇನು ಮಾಡಬೇಕು ಎನ್ನುವುದನ್ನು ಮೊದಲೇ ತೀರ್ಮಾನ ಮಾಡಿಕೊಂಡು ಬಂದು ಈ ರೀತಿ ಮಾಡುತ್ತಿದ್ದಾರೆ. ಅವರು ಮಾತನಾಡುವಾಗ ಸರ್ವಾಧಿಕಾರಿ ಸರ್ಕಾರ ಎಂದು ಹೇಳಿದರು. ಅವರು ಮಾತನಾಡಿದ್ದನ್ನು

X ಈ ಪದವನ್ನು ಅಧ್ಯಕ್ಷರ ಆದೇಶದ ಮೇಲೆ ಕಡತದಿಂದ ತೆಗೆದುಹಾಕಲಾಗಿದೆ.

ನಾವು ಕೇಳಬೇಕು. ಸರ್ಕಾರ ತನ್ನ ಪರವಾಗಿ ಏನು ಉತ್ತರ ಕೊಡುತ್ತದೆಯೋ ಅದನ್ನು ಕೇಳುವ ಸೌಜನ್ಯ ಅವರಿಗಿಲ್ಲ. ಸರ್ವಾಧಿಕಾರಿಗಳು ಯಾರು ಎನ್ನುವುದನ್ನು ಜನ ತೀರ್ಮಾನ ಮಾಡುತ್ತಾರೆ, ಅದನ್ನು ನಾವು ಅವರಿಗೆ ಬಿಡೋಣ. ನಾನು ಈಗಾಗಲೇ ಸಂವಿಧಾನದ ವಿಧಿ 243ನ್ನು ಸದನದ ಗಮನಕ್ಕೆ ತಂದಿದ್ದೇನೆ. ಇದನ್ನೇ ನಾನು ಪುನಃ ತಮ್ಮ ಮಾಹಿತಿಗಾಗಿ ಸದನದಲ್ಲಿ ಓದುತ್ತೇನೆ. ಅದರಲ್ಲಿ ಏನು ಹೇಳಿದ್ದಾರೆಂದರೆ "The superintendence"- even now the superintendence is done by the Election commission itself. ಎಲ್ಲವನ್ನು ಅವರೇ ಮಾಡುತ್ತಾರೆ. "Direction and Control of the preparation of electoral roll" ಮಧ್ಯೆ ಸರ್ಕಾರ ಪ್ರವೇಶ ಮಾಡುವುದಿಲ್ಲ. "Conduct of elections" ಚುನಾವಣೆಯನ್ನು ಅವರೇ ಮಾಡುತ್ತಾರೆ. ಸರ್ಕಾರ ಮಾಡುವುದಿಲ್ಲ. "..... to the panchayats shall be vested in the State Election Commission consisting of Election Commission" and so on so forth ನಾನು ಏಕೆ ಈ ಮಾತನ್ನು ಹೇಳಿದೆ ಅಂದರೆ ಅವರು ಮಾತನಾಡುವಾಗ ಸಂವಿಧಾನಬಾಹಿರ ಕೆಲಸ ಮಾಡಿದ್ದಾರೆಂದು ಹೇಳಿದರು. ಆ ಪದವನ್ನು ಅವರು ಬಳಸಿದ್ದಾರೆ. ಸರ್ಕಾರ ಸಂವಿಧಾನಬಾಹಿರವಾದ ಕೆಲಸ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಅವರಿಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬಾಕಿ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಅವರು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರು ಮಾತನಾಡುವಾಗ 'ನಾಚಿಕೆಗೇಡು' ಎನ್ನುವ ಪದ ಬಳಸಿದ್ದಾರೆ. ಆ ಬಗ್ಗೆ ನಾನು ಮಾತನಾಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಾವು ಈ ಹಿಂದೆ ಇದ್ದ ಶಾಸನದ ಅಡಿಯಲ್ಲಿ ಚುನಾವಣೆಗಳನ್ನು ಮಾಡಿದ್ದೇವೆ. 1993ನೇ ಇಸವಿಯಲ್ಲಿ ಯಾವ ಶಾಸನ ಇತ್ತು ಆ ಶಾಸನದ ಅಡಿಯಲ್ಲಿಯೇ ಪಂಚಾಯತಿಗಳ ಚುನಾವಣೆಗಳನ್ನು ನಡೆಸಿದ್ದೇವೆ. ಅದೇ ಶಾಸನದ ಅಡಿಯಲ್ಲಿಯೇ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾವಣೆಗಳನ್ನು ಮಾಡಿದ್ದೇವೆ. 1997ನೇ ಇಸವಿಯಲ್ಲಿ ಈ ಶಾಸನಕ್ಕೆ ತಿದ್ದುಪಡಿಯನ್ನು ತಂದಮೇಲೆ ಚುನಾವಣೆಗಳನ್ನು ಮಾಡಿದ್ದು ಈ ಸರ್ಕಾರ ಬಂದಮೇಲೆ. ತಮ್ಮ ಕಾಲದಲ್ಲಿ ತಾವು ಏಕೆ ಚುನಾವಣೆಗಳನ್ನು ಮುಂದಕ್ಕೆ ಹಾಕಿದಿರಿ? ನಮ್ಮ ಸರ್ಕಾರ ಬಂದ ತಕ್ಷಣ ಮೊದಲನೆ ಕೆಲಸ ಮಾಡಿರತಕ್ಕಂಥದ್ದು ಪಂಚಾಯತಿ ಚುನಾವಣೆಗಳನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಈ ಕೆಲಸ ಮಾಡಿದ್ದೇವೆ. ಆ ಗೌರವ ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕು. ಇನ್ನು ಮಾನ್ಯ ಸದಸ್ಯರಾದ ಭೈರೇಗೌಡರು ಮಾತನಾಡುತ್ತಾ ನಾಯಿ ನಿಷ್ಠೆಯ ಬಗ್ಗೆ ಪ್ರಸ್ತಾಪ ಮಾಡಿದರು. ಅದಕ್ಕೆ ನಾನು ಹೇಳುವುದಾದರೆ ಯಾರು ತಮ್ಮ ಪಕ್ಷಕ್ಕೆ ನಿಷ್ಠೆಯನ್ನು ತೋರಿಸುವುದಿಲ್ಲವೋ ಅವರಿಗೆ ನಿಷ್ಠೆ ಇರುವುದಿಲ್ಲ, ಯಾರು ತಮ್ಮ ಪಕ್ಷಕ್ಕೆ ನಿಷ್ಠೆಯನ್ನು ತೋರಿಸುತ್ತಾರೋ ಅವರು ನಿಜವಾದ ನಾಯಿ ನಿಷ್ಠೆಯನ್ನು ಹೊಂದಿರುತ್ತಾರೆ.

ನಾಯಿ ತನ್ನ ಯಜಮಾನನಿಗೆ ನಿಷ್ಠೆಯಾಗಿರುತ್ತದೆ, ಅದೇ ರೀತಿ ಪಕ್ಷಕ್ಕೆ ಯಾರು ನಿಷ್ಠರಾಗಿರುತ್ತಾರೋ ಅವರಿಗೆ ನಾಯಿ ನಿಷ್ಠೆ ಎಂದು ಕರೆಯುವುದರಲ್ಲಿ ತಪ್ಪಿಲ್ಲ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಏನೇನು ಹೇಳಿದ್ದೇವೆಯೋ ಆ ಕೆಲಸವನ್ನು ಮಾಡುವುದಕ್ಕೆ ಅಲ್ಲಿ ಕುಳಿತುಕೊಂಡಿದ್ದೇವೆ. ಜನಗಳಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವುದಕ್ಕೆ ನಾವು ಸರ್ಕಾರ

ರಚನೆ ಮಾಡಿದ್ದೇವೆ. ಜನಗಳಿಗೆ ಕೊಟ್ಟ ಮಾತನ್ನು ನಡೆಸಿಕೊಟ್ಟರೆ ಅದೂ ಸಹ ನಾಯಿ ನಿಷ್ಠೆ. ಈ ಒಂದು ಮಸೂದೆಗೆ ತಿದ್ದುಪಡಿಯನ್ನು ತರುತ್ತೇವೆಂದು ನಾವು ಏನು ಹೇಳಿದ್ದೆವೋ ಅದೇ ರೀತಿ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಹಿರಿಯ ಸಚಿವರು, ಅವರು ಈ ವಿಚಾರದಲ್ಲಿ ಸಾಕಷ್ಟು ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ಅವರು ಅವಕಾಶ ಕೊಡಲಿಲ್ಲ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಸಾಕಷ್ಟು ಅನುಭವ ಇದೆ. ಈ ಮಸೂದೆಯ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅದು ಮುಗಿದು ಹೋದ ಅಧ್ಯಾಯ. ಆದರೂ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಈ ಬಗ್ಗೆ ಅವರು ತೀವ್ರವಾದ ಪ್ರತಿಭಟನೆ ಮಾಡಲೇಬೇಕು ಎಂದು ಮನಸ್ಸಿನಲ್ಲಿಟ್ಟುಕೊಂಡೇ ಬಂದಿದ್ದರು; ಮಾನ್ಯ ರಾಜ್ಯಪಾಲರ ಹತ್ತಿರ ಹೋಗಬೇಕು ಎಂದು ಮನಸ್ಸಿನಲ್ಲಿಟ್ಟುಕೊಂಡೇ ಬಂದಿದ್ದರು. ಆದರೆ ಸಂವಿಧಾನದಲ್ಲಿ ಈ ಸದನಕ್ಕೆ ಕೊಟ್ಟಿರತಕ್ಕಂಥ ಹಕ್ಕು ಮಾನ್ಯ ರಾಜ್ಯಪಾಲರ ಜವಾಬ್ದಾರಿಯಿಂದ ಅಲ್ಲ. ಆ ವಿಷಯ ಶಾಸನ ಸಭೆಯಲ್ಲಿ ತೀರ್ಮಾನವಾಗಬೇಕು. ಇಲ್ಲಿ ಆ ಬಗ್ಗೆ ಚರ್ಚೆಯಾಗಬೇಕು. ಆಗಲಿಲ್ಲವೆಂದರೆ ಹೇಗೆ? ಸಂವಿಧಾನದ ಪ್ರಕಾರ ಯಾವ ಕಾರಣಕ್ಕೆ ನೀವು ಮಾನ್ಯ ರಾಜ್ಯಪಾಲರ ಬಳಿಗೆ ಮೆರವಣಿಗೆಯಲ್ಲಿ ಹೋಗುತ್ತೀರಿ? ಇಲ್ಲಿ ಸಂವಿಧಾನಕ್ಕೆ ಯಾವ ರೀತಿ ಅಪಚಾರವಾಗಿದೆ? ತಾವು ತೀರ್ಮಾನ ಮಾಡಿಕೊಂಡು ಬಂದೇ ಈ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದಿರಿ. ತಾವು ಮೊದಲೇ ತೀರ್ಮಾನ ಮಾಡಿಕೊಂಡು ಬಂದೇ ಗಲಾಟೆ ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೇ, ಸರ್ಕಾರದ ವಿರುದ್ಧ ಪೂರ್ವಾಗ್ರಹಪೀಡಿತರಾಗಿಯೇ ಅವರು ಬಂದಿದ್ದರು. ಅವರು ಈ ತಿದ್ದುಪಡಿಯನ್ನು ಅರ್ಥಮಾಡಿಕೊಂಡು ಈ ವಿಚಾರದಲ್ಲಿ ಸಾಕಷ್ಟು ಬೆಳಕು ಚೆಲ್ಲಬಹುದಿತ್ತು. ಆದರೆ ಈ ಕೆಲಸವನ್ನು ಮಾಡಲಿಲ್ಲ. ಇವತ್ತು ಅವರು ಮಾತನಾಡುತ್ತಾ ಒಂದು ಮಾತು ಹೇಳಿದರು. ಪ್ರಮುಖ ಪತ್ರಿಕೆಗಳಲ್ಲಿ ಅಗ್ರಲೇಖನಗಳನ್ನು ಬರೆದಿದ್ದಾರೆಂದು ಹೇಳಿದರು.....

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಮಾತನಾಡುತ್ತಾ ನಾಯಿನಿಷ್ಠೆ ಎನ್ನುವ ಪದವನ್ನು ಬಳಸಿದ್ದಾರೆ. ಅದು ಅನ್‌ಪಾರ್ಲಿಮೆಂಟರಿ ಶಬ್ದವಾದರೆ ಅದನ್ನು ತಾವು ಕಡತದಿಂದ ತೆಗೆದು ಹಾಕುವುದು ಒಳ್ಳೆಯದು. ಒಂದು ವೇಳೆ ಅದು ಅನ್‌ಪಾರ್ಲಿಮೆಂಟರಿ ಶಬ್ದವಲ್ಲದಿದ್ದರೂ ಸಹ ಈ ಸದನದ ಸತ್ಸಂಪ್ರದಾಯವನ್ನು ಉಳಿಸುವ ದೃಷ್ಟಿಯಿಂದ ಈ ಸದನದ ಗೌರವವನ್ನು ಹೆಚ್ಚಿಸುವ ದೃಷ್ಟಿಯಿಂದ ಅಂತಹ ಪದಗಳ ಬಳಕೆ ಸರಿಯಲ್ಲವೆಂದು ನನ್ನ ಭಾವನೆ.

ಅಧ್ಯಕ್ಷರು : ಅವರು ಉದಾಹರಣೆಗೆ ಹೇಳಿದರು. ಆ ಪದವನ್ನು ವಿರೋಧಪಕ್ಷದ ಸದಸ್ಯರು ಬಳಿಸಿದರು, ಅದಕ್ಕೆ ಅವರು ಹೇಳಿದರು ಅಷ್ಟೇ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಅದು ಅನ್-ಪಾರ್ಲಿಮೆಂಟರಿ ಪದ ಅಲ್ಲ. ನಾನು ಪುನಃ ಆ ಪದವನ್ನು ಬಳಸಬೇಕಾಗುತ್ತದೆ. ನಿಷ್ಠೆಗೆ ಮತ್ತೊಂದು ಹೆಸರೇ ನಾಯಿ. ನಾಯಿ ತನ್ನ ಯಜಮಾನನಿಗೆ ನಿಷ್ಠೆಯನ್ನು ಪ್ರದರ್ಶಿಸುತ್ತದೆ. ಮತ್ತು ಅವರು ಮಾತನಾಡುವಾಗ ಈ ಮಸೂದೆ ತಮಗೆ 'ಭಸ್ಮಾಸುರ' ಆಗುತ್ತದೆಂದು ಹೇಳಿದರು. ಅದನ್ನು ನಾವು ಸ್ವೀಕಾರ ಮಾಡಲು

ಸಿದ್ಧವಾಗಿದ್ದೇವೆ. ಮತ್ತು ಅವರು ಇನ್ನೂ ಒಂದು ಮಾತು ಹೇಳಿದರು, ಮೇಲ್ಮನೆಯಲ್ಲಿ ಈ ಮಸೂದೆ ನಪಾಸಾಗಿ ಬರುತ್ತದೆಂದು ಹೇಳಿದರು. ಮತ್ತು ಈ ಮಸೂದೆ ಪುನಃ ಇಲ್ಲಿಗೆ ಬರಬೇಕಾಗುತ್ತದೆಂದು ಹೇಳಿದರು. ಇನ್ನೊಂದು ಸದನದ ಬಗ್ಗೆ ಇಲ್ಲಿ ಅವರು ಅಷ್ಟು ಲಘುವಾಗಿ ಮಾತನಾಡಬಾರದು. ಆ ಸದನದ ವಿಷಯವನ್ನು ಈ ಸದನದಲ್ಲಿ ಯಾರೂ ಚರ್ಚೆ ಮಾಡಬಾರದು, ಅದಕ್ಕೆ ತಾವು ಅನುಮತಿ ಕೊಡಬಾರದು. ಮತ್ತು ಅವರು ಮಾತನಾಡುವಾಗ ಕನ್ನಡ ನಿಘಂಟಿನಲ್ಲಿ ಯಾವ ಯಾವ ಶಬ್ದಗಳು ಕಠೋರವಾಗಿದ್ದವೋ ಆ ಎಲ್ಲಾ ಶಬ್ದಗಳನ್ನು ಬಳಸಿದ್ದಾರೆ. ಆ ಎಲ್ಲಾ ಶಬ್ದಗಳಿಗೂ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ. ವಸ್ತು ಸ್ಥಿತಿಯಲ್ಲಿ ಅವರು ಎರಡು ಅಂಶಗಳನ್ನು ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ legislative competence of this House, they have no dispute. ತಮಗೆ ಹೇಳಿದ್ದಾರೆ. They have said "Unconstitutional". It is not unconstitutional. ಇನ್ನು ಪತ್ರಿಕೆಗಳಲ್ಲಿ ಅಗ್ರಲೇಖನಗಳನ್ನು ಬರೆದು ಇದೊಂದು ಕರಾಳ ಶಾಸನ ಎಂದು ಹೇಳಿದ್ದಾರೆಂದು ಅವರು ಹೇಳಿದರು. ಆ ರೀತಿ ಯಾವ ಪತ್ರಿಕೆಯಲ್ಲಿಯೂ ಸಹ ಬಂದಿಲ್ಲ. ಒಂದುವೇಳೆ ಅವರು ಬರೆದಿದ್ದರೆ ಪತ್ರಿಕಾ ಸ್ವಾತಂತ್ರ್ಯವಿದೆ, ಅವರು ಬರೆಯುತ್ತಾರೆ. ನಮ್ಮಲ್ಲಿ ಏನಾದರೂ ತಪ್ಪು ಇದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೂ ನಾವು ತಯಾರಾಗಿದ್ದೇವೆ, ಮಾಧ್ಯಮಗಳ ಮೂಲಕ ಸರ್ಕಾರದ ತಪ್ಪುಗಳನ್ನು ತಿಳಿಸುವುದಕ್ಕೆ ಮಾಧ್ಯಮಗಳಿಗೆ ಸಂಪೂರ್ಣ ಅಧಿಕಾರ ಇದೆ. ನಾವು ಈಗ ಏನು ಮಸೂದೆಯನ್ನು ತಂದಿದ್ದೇವೆ ಆ ಮಸೂದೆಯನ್ನು ಒಂದು ಒಳ್ಳೆಯ ಉದ್ದೇಶಕ್ಕೋಸ್ಕರ ತಂದಿದ್ದೇವೆ, ಇಲ್ಲಿ ಆ ಸಮಗ್ರ ಮಸೂದೆಯನ್ನು ಮಂಡಿಸಿದ್ದೇವೆ. ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ನೀಡಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಇದು ಮುಗಿದ ಅಧ್ಯಾಯ ಎಂದು ಹೇಳಿದರು. ನನ್ನ ಪ್ರಕಾರ ಇದು ಇನ್ನೂ ಪ್ರಾರಂಭದ ಅಧ್ಯಾಯ. ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಅನೇಕ ವಿಚಾರಗಳನ್ನು ಹೇಳಿದರು, ಆ ಬಗ್ಗೆ ತಾವು ಕಿವಿಗೊಡಲಿಲ್ಲ. ತಮಗೆ ಇನ್ನು ಮೇಲೆ ಅನೇಕ ತೊಂದರೆಗಳು ಬರುವುದು. ನಾನು ಈ ಸಭೆಯ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಮಾನ್ಯ ಅಧ್ಯಕ್ಷರಿಗೆ ಹೇಳುವುದೇನೆಂದರೆ ನಮ್ಮ ರಕ್ಷಣೆಗೆ ತಾವೇ ಬರಬೇಕು. ಈ ಒಂದು ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ನಮಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿದಾಗಲೂ ಸಹ ತಾವು ಅವಕಾಶ ಕೊಡಲಿಲ್ಲ. ಈಗ ಈ ವಿಷಯ ಮುಗಿದ ಅಧ್ಯಾಯ ಎಂದು ಹೇಳುತ್ತಿದ್ದೀರಿ. ಇದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರ ಗಮನಕ್ಕೆ ನಾನಾದರೂ ಒಂದು ವಿಷಯವನ್ನು ತರಬಯಸುತ್ತೇನೆ. ಈ ವಿಷಯದ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಮೊದಲೇ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟು ನಂತರ ಮಸೂದೆಗೆ ಅಂಗೀಕಾರ ಪಡೆಯಬಹುದಿತ್ತು. ಆದರೆ ಅದಕ್ಕೆ ತಾವು ಅವಕಾಶ ಕೊಡಲಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮೊನ್ನೆ ಒಂದು ಒಳ್ಳೆಯ ಕೆಲಸ ಮಾಡಿದರು. ಲಾಟರಿ ಮೂಲಕ ಅಧ್ಯಕ್ಷರನ್ನು ನೇಮಕ ಮಾಡುವುದು. ರಾಜ್ಯದ ಹಿತದೃಷ್ಟಿಯಿಂದ

ಅವರು ಒಂದು ಒಳ್ಳೆಯ ಕೆಲಸ ಮಾಡಿದರು. ಅದೇ ರೀತಿ ಇದನ್ನು ಸಹ ಮಾಡಿದ್ದರೆ ತಮಗೆ ಒಳ್ಳೆಯ ಹೆಸರು ಬರುತ್ತಿತ್ತು. ಮುಂದೆಯಾದರೂ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಚುನಾವಣೆ ಮಾಡುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ಕೊಟ್ಟಿದ್ದೇವೆ, ಸರ್ಕಾರ ಆ ಅಧಿಕಾರ ತೆಗೆದುಕೊಂಡಿಲ್ಲ ಎಂದು ಹೇಳಿದರು. ಮತ್ತು ಹಿಂದೆ 1993ರ ವ್ಯವಸ್ಥೆಯ ದೃಷ್ಟಿಕೋನ ಇಟ್ಟುಕೊಂಡು ಮೀಸಲಾತಿಯನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ತಂದಿದೆ. ಶ್ರೀ ಎಂ.ಪಿ. ಪ್ರಕಾಶ್ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರಾಗಿದ್ದಾಗ ಈ ಮೀಸಲಾತಿಯಿಂದ ನನ್ನ ಕ್ಷೇತ್ರದಲ್ಲಿ ಇಂತಹವರಿಗೆ ಅಧ್ಯಕ್ಷಗಿರಿ ಕೊಡಬೇಕು, ಇಂತಹವರಿಗೆ ಉಪಾಧ್ಯಕ್ಷಗಿರಿ ಕೊಡಬೇಕು ಎಂದು ಶಾಸಕರಿಂದ, ಮಂತ್ರಿಗಳಿಂದ ಒತ್ತಡ ಬಂತು, ಅದಕ್ಕೆ ಪುನಃ ಅವರು ಆ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ಕೊಟ್ಟರು. ಮತ್ತೆ ಸರ್ಕಾರ ಒಂದು ಆದೇಶದ ಪ್ರಕಾರ ಚುನಾವಣಾ ಆಯೋಗಕ್ಕೆ ಅಧಿಕಾರ ಕೊಟ್ಟಿದ್ದರು. ಇದರಿಂದ ಮಾನ್ಯ ಸಚಿವರು ಹೇಳಿದ ಪ್ರಕಾರ ಯಾವ ಒಂದು ಬದಲಾವಣೆಯೂ ಆಗಲಿಲ್ಲ. ಆದರೆ ತಾವು ಈಗ ಬದಲಾವಣೆ ಮಾಡಿದ್ದೀರಿ. ಇದರಿಂದ ಜನರಿಗೆ ಏನೂ ಸಮಸ್ಯೆ ಇಲ್ಲ. ಸರ್ಕಾರಕ್ಕೆ ಸಮಸ್ಯೆ ಆಗಬಹುದು, ಈ ಸಮಸ್ಯೆಯನ್ನು ತಾವು ಹೇಗೆ ನಿವಾರಣೆ ಮಾಡಿಕೊಳ್ಳುತ್ತೀರಿ? ಸರ್ಕಾರಕ್ಕೆ ಸಮಸ್ಯೆ ಬರದ ಹಾಗೆ ತಾವು ನೋಡಿಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ವಿರೋಧಪಕ್ಷದ ಸದಸ್ಯರ ಒಂದೇ ಒಂದು ವಾದ ಏನೆಂದರೆ ನಮಗೆ ಈ ಮಸೂದೆ ಬಗ್ಗೆ ಮಾತನಾಡಲು ಸಾಕಷ್ಟು ಸಮಯ ಕೊಡಲಿಲ್ಲ ಎನ್ನುವುದು. ಈ ಮಸೂದೆಯನ್ನು ಮಂಡನೆ ಮಾಡುವಾಗ ವಿರೋಧಪಕ್ಷದ ಸದಸ್ಯರು ಗಲಾಟೆ ಮಾಡುತ್ತಿದ್ದರೆ ಇನ್ನು ಅವರಿಗೆ ಮಾತನಾಡಲು ಸಮಯ ಎಲ್ಲಿಂದ ಸಿಗುತ್ತದೆ. ಒಂದು ವೇಳೆ ಈ ಮಸೂದೆ ಪುನಃ ಈ ಸದನದಲ್ಲಿ ಮಂಡನೆಯಾದರೆ ಆಗ ಅವರು ಮಾತನಾಡಿದರೆ ಸಂತೋಷ. ಮಾನ್ಯ ಕಾನೂನು ಸಚಿವರು ಮಾತನಾಡುತ್ತಾ ವಿರೋಧಪಕ್ಷದ ಸದಸ್ಯರು ಕೆಲವು ಅನ್‌ಪಾರ್ಲಿಮೆಂಟರಿ ಪದಗಳನ್ನು ಬಳಸಿದ್ದಾರೆಂದು ಹೇಳಿದರು. ಆ ಪದಗಳನ್ನು ತೆಗೆಸಿ ಹಾಕಲು ನಾನು ತಿಳಿಸಿದ್ದೇನೆ. ಮತ್ತು ನಾನು ಎಲ್ಲಾ ಸದಸ್ಯರಿಗೂ ಅನ್-ಪಾರ್ಲಿಮೆಂಟರಿ ಪದಗಳು ಯಾವ್ಯಾವು, ಆ ಪದಗಳನ್ನು ಬಳಸಬಾರದು ಎಂದು ಹೇಳಿ ಒಂದು ಬುಕ್‌ಲೆಟ್ ಮಾಡಿಸಿ ಎಲ್ಲಾ ಸದಸ್ಯರಿಗೂ ಕೊಟ್ಟಿದ್ದೇವೆ. ಆ ಬುಕ್‌ಲೆಟ್‌ನ್ನು ಮಾನ್ಯ ಸದಸ್ಯರು ನೋಡಿಕೊಂಡು ಬಂದು ಮಾತನಾಡಿದರೆ ಈ ಸಮಸ್ಯೆ ಇರುವುದಿಲ್ಲ. ಇಲ್ಲಿ ಹೊಸದಾಗಿ ಆರಿಸಿ ಬಂದ ಶಾಸಕರು 80 ಜನ ಇದ್ದಾರೆ. ಅವರು ಆ ಬುಕ್‌ಲೆಟನ್ನು ನೋಡಿಕೊಂಡು ಬಂದರೆ ಒಳ್ಳೆಯದು. ನಾವು ಈ ಬುಕ್‌ಲೆಟನ್ನು ಏತಕ್ಕೆ ಕಳುಹಿಸಿದೆವು. ಅಂದರೆ ಮಾನ್ಯ ಸದಸ್ಯರು ಯಾರಾದರೂ ಅನ್‌ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಿದಾಗ ಅದರ ಮೇಲೆ ಸುಮಾರು ಒಂದೊಂದು ಗಂಟೆ ಚರ್ಚೆಯಾಗುತ್ತದೆ. ಅದನ್ನು ತಪ್ಪಿಸುವ ಸಲುವಾಗಿ ಈ ರೀತಿ ಮಾಡಿದ್ದೇವೆ.

ಶ್ರೀ ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ನಾಯಿ ನಿಷ್ಠೆ ಎನ್ನುವುದು ಅನ್‌ಪಾರ್ಲಿಮೆಂಟರಿ ಪದ ಅಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ ; ಈ ಸದನದಲ್ಲಿ ನಾಯಿ ನಿಷ್ಠೆ ಎನ್ನುವ ಪದದ ಬಗ್ಗೆ ರೂಲಿಂಗ್ ನೀಡಿದ್ದಾರೆ. ಅದು ಅನ್‌ಪಾರ್ಲಿಮೆಂಟರಿ ಪದ ಅಲ್ಲ. ಆದರೂ ಸದನದ ಗೌರವದ ದೃಷ್ಟಿಯಿಂದ ಆ ಪದ ಬಳಸುವುದು ಅಷ್ಟು ಸತ್ಸಂಪ್ರದಾಯವಾಗುವುದಿಲ್ಲ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಆ ಪದ ಉಪಯೋಗ ಮಾಡಿದರೆ ತಪ್ಪೇನೂ ಇಲ್ಲ, ಇರಲಿ ಬಿಡಿ.

ಅಧ್ಯಕ್ಷರು : ಈ ವಿಷಯದ ಚರ್ಚೆಯನ್ನು ಇಲ್ಲಿಗೆ ಮುಗಿಸಿ ನಾವು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರೇಷ್ಮೆ ಗೂಡು ಮಾರಾಟ ಹಾಗೂ ಬದಲಾವಣೆ (ವಿನಿಮಯ) ಕೇಂದ್ರ

51 - ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಗೂಡು ಮಾರಾಟ ಹಾಗೂ ಬದಲಾವಣೆ (ವಿನಿಮಯ) ಕೇಂದ್ರಗಳನ್ನು ಕಂಪ್ಯೂಟರೀಕರಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಕಂಪ್ಯೂಟರೀಕರಣ ಪೂರ್ಣಗೊಳಿಸಲು ಸರ್ಕಾರವು ಹಾಕಿಕೊಂಡಿರುವ ಕಾಲಮಿತಿ ಎಷ್ಟು?

ಇ) ರೇಷ್ಮೆ ಬೆಳೆ ಯೋಜನೆ ಕಂಪ್ಯೂಟರೀಕರಣಗೊಳಿಸಲು ಉದ್ದೇಶಿತ ವೆಚ್ಚವೆಷ್ಟು? ಆಗಿರುವ ವೆಚ್ಚವೆಷ್ಟು?

ಈ) ಕಂಪ್ಯೂಟರೀಕರಣಗೊಳಿಸಲು ಜಪಾನ್ ಮಾದರಿ ಅಳವಡಿಸಿಕೊಳ್ಳಲಾಗುತ್ತಿದೆಯೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ ಇಲ್ಲಿನ ವಹಿವಾಟನ್ನು ಗಣಕೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು ಇಲ್ಲಿ ರೇಷ್ಮೆ ನೂಲಿನ ದೈನಂದಿನ ಮಾರಾಟದ ಮಾಹಿತಿಯನ್ನು ಅನ್-ಲೈನ್ ವ್ಯವಸ್ಥೆಯಲ್ಲಿ ಕಂಪ್ಯೂಟರೀಕರಣ ಕಾರ್ಯವು ನಡೆಯುತ್ತಿದೆ.

ಸೆರಿ-2000 ಪ್ರಾಜೆಕ್ಟ್ ಅಡಿಯಲ್ಲಿ ರೇಷ್ಮೆ ಇಲಾಖೆಯ ಚಟುವಟಿಕೆಗಳನ್ನು ಗಣಕೀಕರಿಸಲು